# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 • ಸಂಚಿಕೆ: 147 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 11.12.2024 • ಬುಧವಾರ • ಪುಟ:04 • ಬೆಲೆ:2
Volume:02 • Issue: 147 • PRGI No:KARKAN/2023/88055 • VIJAYANAGARA • 11.12.2024 • Wednesday • Page:04 • Rs:2



BOOK YOUR ADVERTISEMENTS TO REACH MORE READERS
1,00,000+ Digital E-PAPER READERS
M: 94486 33038
Book Advance Get More Benefits
No.1 HAMPI TIMES LEADING VIJAYANAGARA District News Paper



ಸುದ್ದಿ, ಜಾಹೀರಾತು,
ಜಾಗೃತಿ ಪ್ರಕಟಣೆಗಳ ಪ್ರಕಟಣೆಗಾಗಿ
ಸಂಪರ್ಕಿಸಿ
ಮೊ: 9448633038
e-mail: hampitimes@gmail.com


# ಕರ್ನಾಟಕದ 16ನೇ ಮುಖ್ಯಮಂತ್ರಿ ಮಾಜಿ ಸಿಎಂ ಕೃಷ್ಣ ಇನ್ನಿಲ್ಲ ಸಾಧನೆಗಳು ಜೀವಂತ



1-5-1932 - 10-12-2024 (92)

## ಆಶಾವಾದಿ ಮುತ್ಸದ್ಧಿ ರಾಜಕಾರಣಿ ಎಂ.ಎಸ್. ಕೃಷ್ಣ

### ಕನ್ನಡ ವಿ.ವಿ. ಕುಲಪತಿ ಡಾ.ಡಿ.ವಿ. ಪರಮಶಿವಮೂರ್ತಿ ಹೇಳಿಕೆ | ಕರ್ನಾಟಕಕ್ಕೆ ಅವರ ಕೊಡುಗೆ ಅಪಾರ

■ **ಹಂಪಿ ಟೈಮ್ಸ್ ಹೊಸಪೇಟೆ**

ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾಗಿ ಸೇವೆ ಸಲ್ಲಿಸಿದ್ದ ದಿವಂಗತ ಸನ್ಮಾನ್ಯ ಎಸ್.ಎಂ. ಕೃಷ್ಣ ಅವರು ರಾಜಕೀಯ ಮುತ್ಸದ್ಧಿಗಳು, ಜನಪ್ರಿಯ ರಾಜಕಾರಣಿಯೂ ಆಗಿ ಹೆಸರಾಗಿದ್ದರು. ಎಂತಹ ಸಮಯದಲ್ಲಿಯೂ ಸಹನೆ ಕಳೆದು ಕೊಳ್ಳದೇ ಶಾಂತ ಚಿತ್ತದಿಂದ ಸವಾಲುಗಳನ್ನು ನಿಭಾಯಿಸುತ್ತಿದ್ದರು ಎಂದು ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಡಾ.ಡಿ.ವಿ. ಪರಮಶಿವಮೂರ್ತಿ ತಿಳಿಸಿದರು.

ಕನ್ನಡ ವಿಶ್ವವಿದ್ಯಾಲಯದ ಪಂಪ ಸಭಾಂಗಣದಲ್ಲಿ ಮಂಗಳವಾರ ಆಯೋಜಿಸಿದ್ದ ದಿವಂಗತ ಎಸ್.ಎಂ. ಕೃಷ್ಣ ಅವರ ಗೌರವಾರ್ಥ ಸಂತಾಪ ಸೂಚಕ ಸಭೆಯಲ್ಲಿ ಮಾತನಾಡಿ, ಸೋಮನಹಳ್ಳಿ ಮಲ್ಲಯ್ಯ ಕೃಷ್ಣ (1 ಮೇ 1932 – 10 ಡಿಸೆಂಬರ್ 2024) ಒಬ್ಬ ಭಾರತೀಯ ಮುತ್ಸದ್ಧಿ ರಾಜಕಾರಣಿಯಾಗಿದ್ದು, ಅವರು 2009 ರಿಂದ ಅ. 2012ರ ವರೆಗೆ ಭಾರತದ ವಿದೇಶಾಂಗ ವ್ಯವಹಾರಗಳ ಸಚಿವರಾಗಿ ಸೇವೆ. 1999ರಿಂದ 2004ರವರೆಗೆ ಕರ್ನಾಟಕದ 16ನೇ ಮುಖ್ಯಮಂತ್ರಿಗಳಾಗಿಯೂ ಮತ್ತು 2004ರಿಂದ 2008ರ ವರೆಗೆ ಮಹಾರಾಷ್ಟ್ರದ 19ನೇ ರಾಜ್ಯಪಾಲರಾಗಿ ಸೇವೆ ಸಲ್ಲಿಸಿದ್ದರು.

ಎಸ್.ಎಂ.ಕೃಷ್ಣ ಅವರು ಡಿಸೆಂಬರ್ 1989ರಿಂದ 1993ರ ವರೆಗೆ ಕರ್ನಾಟಕ ವಿಧಾನಸಭಾ ಸ್ಪೀಕರ್ ಆಗಿಯೂ, 2023 ರಲ್ಲಿ ಕೃಷ್ಣ ಅವರಿಗೆ ಪದ್ಮ ವಿಭೂಷಣ ಪ್ರಶಸ್ತಿಯನ್ನು ನೀಡಲಾಗಿತ್ತು. ಜೊತೆಗೆ ಭಾರತದ ಎರಡನೇ ಅತ್ಯುನ್ನತ ನಾಗರಿಕ ಪ್ರಶಸ್ತಿಗೆ ಭಾಜನರಾಗಿದ್ದರು.



1962ರಲ್ಲಿ ವಿಧಾನಸಭೆಗೆ ಆಯ್ಕೆ, 1968ರಲ್ಲಿ ಲೋಕಸಭೆಗೆ ಆಯ್ಕೆ, 1971ರಲ್ಲಿ ಮರು ಲೋಕಸಭೆಗೆ ಆಯ್ಕೆ, 1972ರಲ್ಲಿ ವಿಧಾನ ಸಭೆಗೆ ಆಯ್ಕೆಯಾಗಿ ವಾಣಿಜ್ಯ, ಉದ್ಯಮ, ಸಂಸದೀಯ ಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸುತ್ತಾರೆ. 1983 ರಲ್ಲಿ ಉದ್ಯಮ ಮಂತ್ರಿಗಳಾಗುತ್ತಾರೆ. 1984ರಲ್ಲಿ ಹಣಕಾಸು ಮಂತ್ರಿಯಾಗಿ, 1989–92ರವರೆಗೆ ವಿಧಾನಸಭೆಗೆ ಸ್ಪೀಕರ್ ಆಗಿಯೂ, 1992–94ರವರೆಗೆ ಉಪ ಮುಖ್ಯಮಂತ್ರಿಯಾಗಿ, 1996ರಲ್ಲಿ ರಾಜ್ಯಸಭೆ (ಎಂ.ಎಲ್.ಸಿ)ಗೆ ಚುನಾಯಿತ ರಾಗುತ್ತಾರೆ, 1999ರಿಂದ ಕರ್ನಾಟಕದ 16ನೇ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸುತ್ತಾರೆ. 3.11.2001ರಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾಲಯದ ವಾಲ್ಮೀಕಿ ಅಧ್ಯಯನ ಪೀಠಕ್ಕೆ 15 ಲಕ್ಷ ರೂ. ಕೊಟ್ಟು ಪೀಠವನ್ನು ಉದ್ಘಾಟಿಸುತ್ತಾರೆ.

ಈ ಸಂತಾಪ ಸೂಚಕ ಸಭೆಯಲ್ಲಿ ವಿವಿಧ ನಿಕಾಯದ ಡೀನರು, ವಿವಿಧ ವಿಭಾಗಗಳ ಮುಖ್ಯಸ್ಥರು, ಅಧ್ಯಾಪಕರು, ಅಧಿಕಾರಿಗಳು, ಸಿಬ್ಬಂದಿಗಳು, ಸಂಶೋಧಾನಾರ್ಥಿಗಳು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದು, ದಿವಂಗತರ ಆತ್ಮಕ್ಕೆ ಶಾಂತಿಯನ್ನು ಕೋರಿದರು.

## ಆರೋಗ್ಯ ಇಲಾಖೆಯ ವಿವಿಧ ಹುದ್ದೆ: ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟ, ಆಕ್ಷೇಪಣೆಗೆ ಆಹ್ವಾನ

■ **ಹಂಪಿ ಟೈಮ್ಸ್ ಹೊಸಪೇಟೆ**

ರಾಷ್ಟ್ರೀಯ ಆರೋಗ್ಯ ಅಭಿಯಾನ ಮತ್ತು ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನದ ಎನ್‌ವಿಬಿಡಿಸಿಪಿ ಕಾರ್ಯಕ್ರಮದ ಅಡಿಯಲ್ಲಿ ಆರೋಗ್ಯ ಇಲಾಖೆಯಿಂದ ಆಹ್ವಾನಿಸಿದ್ದ ವಿವಿಧ ಹುದ್ದೆಯ ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಿಸಿದ್ದು, ಆಕ್ಷೇಪಣೆ ಆಹ್ವಾನಿಸಲಾಗಿದೆ.

ಜಿಲ್ಲಾ ವಿಬಿಡಿ ಸಮಾಲೋಚಕರು 1 ಹುದ್ದೆ, ಎಫ್‌ಎಲ್‌ಎ 1 ಹುದ್ದೆಗೆ ಅರ್ಜಿ ಆಹ್ವಾನಿಸಲಾಗಿದ್ದು, ಈ ನೇಮಕಾತಿಯ ಒಟ್ಟು ಅರ್ಜಿ ಸಲ್ಲಿಸಿದವರ ಪಟ್ಟಿ, ತಾತ್ಕಾಲಿಕ ಆಯ್ಕೆ ಪಟ್ಟಿ, ಕಾಯ್ದಿರಿಸಿದ ಆಯ್ಕೆ ಪಟ್ಟಿ ತಿರಸ್ಕೃತ ಅರ್ಜಿಗಳ ಪಟ್ಟಿಗಳನ್ನು ಜಿಲ್ಲಾ ಆಶ್ರೀತರೋಗಗಳ ನಿಯಂತ್ರಣಾಧಿಕಾರಿ ಕಚೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲಾಗಿದ್ದು, ಇದಕ್ಕೆ ಸಂಬಂಧಿಸಿದಂತೆ ಯಾವುದಾದರೂ ಆಕ್ಷೇಪಣೆಗಳಿದ್ದಲ್ಲಿ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ಡಿಸೆಂಬರ್ 18ರ ಸಂಜೆ 5 ಗಂಟೆಯ ಒಳಗಾಗಿ ಕಚೇರಿಯ ಸಮಯದಲ್ಲಿ ಲಿಖಿತ ರೂಪದಲ್ಲಿ ಆಕ್ಷೇಪಣೆ ಸಲ್ಲಿಸಬಹುದಾಗಿದೆ ಎಂದು ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಡಿ.12 ವಿವಿಧೆಡೆ ವಿದ್ಯುತ್ ವ್ಯತ್ಯಯ

■ **ಹಂಪಿ ಟೈಮ್ಸ್ ಹೊಸಪೇಟೆ**

ಸಂಕ್ಲಾಪುರದ 110/11ಕೆವಿ ವಿದ್ಯುತ್ ವಿತರಣಾ ಕೇಂದ್ರದಲ್ಲಿ ನಿರ್ವಹಣಾ ಕಾಮಗಾರಿ ಪ್ರಯುಕ್ತ ಡಿಸೆಂಬರ್ 12 ರಂದು ಬೆಳಿಗ್ಗೆ 9 ರಿಂದ ಸಂಜೆ 5 ಗಂಟೆಯವರೆಗೆ ನಗರದ ವಿವಿಧೆಡೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಅಂದು, ಜಂಬುನಾಥ ಗುಡಿ, ಎಂ.ಪಿ.ಪ್ರಕಾಶನಗರ, ವಿಜಯನಗರ, ಸಂಕ್ಲಾಪುರ, ರಾಜಾಪುರ, ಬಸವನದುರ್ಗ, ಕಲ್ಲಹಳ್ಳಿ, ವಡ್ಡರಹಳ್ಳಿ ವ್ಯಾಪ್ತಿಗೆ ಒಳಪಡುವ ಸುತ್ತ ಮುತ್ತಲಿನ ಪ್ರದೇಶಗಳಾದ ಬಳ್ಳಾರಿ ರೋಡ್ ಸಿರ್ಸಿನ್‌ಕಲ್, ನಿಯಾಜಿ ನಗರ, ಅಜಾದ್ ನಗರ, ಈಶ್ವರ ನಗರ, ಉಕ್ಕಡಕೆರೆ, ಜೆ.ಪಿ. ನಗರ, ಅರವಿಂದ ನಗರ, ಬಸ್ ಡಿಪೊ ಏರಿಯಾ, ಸಾಯಿ ಕಾಲೋನಿ, ಹಂಚಿನಗುಡಿ, ಕೊಂಡನಾಯಕನ ಹಳ್ಳಿ, ಅನಂತಶಯನಗುಡಿ, ಸಂಕ್ಲಾಪುರ ಇಂಡಸ್ಟ್ರಿಯಲ್ ಏರಿಯಾ, ಕರ್ನಾಟಕ ಆಯಿಲ್ ಫ್ಯಾಕ್ಟರಿ ಏರಿಯಾ, ಕಾರಿಗನೂರ, ವಿನಾಯಕ ನಗರ, ಆಕಾಶವಾಣಿ, ಪಾರ್ವತಿನಗರ, ವಾಲ್ಮೀಕಿ ನಗರ, ಸಂಡೂರು ರೋಡ್, ರಾಮಾ ಟಾಕೀಸ್ ಏರಿಯಾ, ಚಲುವಾದಿ ಕೇರೆ, ಉಕ್ಕಡಕೆರೆ, ಚಿತ್ತರಕೆರೆ, ಮ್ಯಾಸಿಕೆರೆ, ಬಾಣದ ಕೆರೆ, ಜಂಬುನಾಥ ಹಳ್ಳಿ, ಮಾರುತಿ ಕಾಲೋನಿ, ಸಂಕ್ಲಾಪುರ, ಸಾಯಿಬಾಬಾ ಗುಡಿ ಏರಿಯಾ, ಡ್ಯಾಮ್ ರೋಡ್, ಟಿ.ಬಿ.ಡ್ಯಾಮ್, ಜಿಲ್ಲಾಧಿಕಾರಿಗಳ ಕಾರ್ಯಾಲಯ. ಎಸ್.ಪಿ. ಕಾರ್ಯಾಲಯ, ಹೊಸಪೇಟೆ ನಗರ ವ್ಯಾಪ್ತಿಗೆ ಒಳಪಡುವ ಎಲ್ಲಾ ಕುಡಿಯುವ ನೀರಿನ ಘಟಕಗಳು, ಎನ್ ಕಾಲೋನಿ, ಗಾಂಧೀ ಕಾಲೋನಿ, ಎಂ.ಜೆ ನಗರ, ವಿವೇಕಾನಂದ ನಗರ, ಹರಿಹರ ರಸ್ತೆ, ವಿದ್ಯಾನಗರ, ಗೋಕುಲ ನಗರ, ನಿಶಾನಿ ಕ್ಯಾಂಪ್ ಇವಿಕ್ಯಾಂಪ್, ಡ್ರಸ್ ಕ್ಯಾಂಪ್, ಕಲ್ಲಹಳ್ಳಿ, ರಜಾಪುರ, ಜಿ.ಜಿ ಕ್ಯಾಂಪ್, ಕಣಿವಿರಾಯನಗುಡಿ, ವ್ಯಾಸನಕೆರೆ, ಕಾಕುಬಾಳು, ಗುಡ್ಲುವದ್ದಿಗೇರೆ, ಪಿ.ಕೆ ಹಳ್ಳಿ, ನಾಗೇನಹಳ್ಳಿ, ಬಸವನದುರ್ಗ, ಹೊಸೂರು, ಇಪ್ಪಿತ್ತೇರಿ ಮಾಗಣಿ, ನರಸಾಪುರ, 118 ಡಣಾಪುರ ಮತ್ತು ಶುಭ್ ಲಾಭ್ ಕೈಗಾರಿಕೆಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದ್ದು, ಸಾರ್ವಜನಿಕರು ಸಹಕರಿಸಬೇಕು ಎಂದು ಹೊಸಪೇಟೆ ಜೆಸ್ಕಾಂನ ನಗರ ವಿಭಾಗದ ಕಾರ್ಯ ಮತ್ತು ಪಾಲನಾ ಕಾರ್ಯನಿರ್ವಾಹಕ ಅಭಿಯಂತರರು(ಎ), ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಜಿಲ್ಲಾ ಮಟ್ಟದ ವಿಜ್ಞಾನ ಮೇಳ ಡಿ. 14ಕ್ಕೆ ಮುಂದೂಡಿಕೆ

■ **ಹಂಪಿ ಟೈಮ್ಸ್ ಕೊಪ್ಪಳ**

ಕೊಪ್ಪಳ ಜಿಲ್ಲೆಯ ಪದವಿ ಮತ್ತು ಪದವಿ ಪೂರ್ವ ಮಹಾವಿದ್ಯಾಲಯಗಳ ವಿದ್ಯಾರ್ಥಿಗಳಿಗಾಗಿ ಯುವಜನ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕೊಪ್ಪಳ ನೆಹರು ಯುವ ಕೇಂದ್ರ ಹಾಗೂ ಶ್ರೀ ಗವಿಸಿದ್ದೇಶ್ವರ ಕಲಾ ವಿಜ್ಞಾನ ಮತ್ತು ವಾಣಿಜ್ಯ ಪದವಿ ಮಹಾವಿದ್ಯಾಲಯದ ಸಹಯೋಗದಲ್ಲಿ ಡಿ.11ರಂದು ಗವಿಸಿದ್ದೇಶ್ವರ ಕಲಾ ವಿಜ್ಞಾನ ಮತ್ತು ವಾಣಿಜ್ಯ ಪದವಿ ಮಹಾವಿದ್ಯಾಲಯದಲ್ಲಿ ಹಮ್ಮಿಕೊಳ್ಳಲಾಗಿದ್ದ ಒಂದು ದಿನದ ಜಿಲ್ಲಾ ಮಟ್ಟದ ವಿಜ್ಞಾನ ವಸ್ತು ಪ್ರದರ್ಶನವನ್ನು ಡಿ. 14ಕ್ಕೆ ಮುಂದೂಡಲಾಗಿದೆ.

ಕರ್ನಾಟಕ ರಾಜ್ಯದ ಮಾಜಿ ಮುಖ್ಯಮಂತ್ರಿಗಳು ಮತ್ತು ಮಾಜಿ ಕೇಂದ್ರ ಸಚಿವರಾದ ಎಸ್.ಎಂ.ಕೃಷ್ಣ ರವರು ನಿಧನರಾಗಿದ್ದು, ದಿವಂಗತರ ಗೌರವಾರ್ಥವಾಗಿ ಸರ್ಕಾರವು ಡಿ. 11ರ ಬುಧವಾರದಂದು ಸಾರ್ವತ್ರಿಕ ರಜೆ ಘೋಷಿಸಲಾಗಿರುವುದರಿಂದ ಮತ್ತು 3 ದಿನಗಳ ಕಾಲ ಶೋಕಾಚರಣೆ ನಿಮಿತ್ಯ ಜಿಲ್ಲಾ ಮಟ್ಟದ ವಿಜ್ಞಾನ ಮೇಳವನ್ನು ಡಿ. 14ರಂದು ನಡೆಸಲಾಗುವುದು ಎಂದು ಕೊಪ್ಪಳ ನೆಹರು ಯುವ ಕೇಂದ್ರದ ಜಿಲ್ಲಾ ಯುವ ಅಧಿಕಾರಿ ಮಾಂಟು ಪಾತರ ಪ್ರಕಟನೆಯಲ್ಲಿ ತಿಳಿಸಿದ್ದಾರೆ.

## ರಕ್ತ ಉತ್ಪನ್ನಕ್ಕಿಲ್ಲ ಪರ್ಯಾಯ ವ್ಯವಸ್ಥೆ


### ಕಾನಮಡುಗಿನ ಶ್ರೀ ಐಮಡಿ ಶರಣಾರ್ಯರ ಹೇಳಿಕೆ | ಸ್ವಯಂಪ್ರೇರಣೆಯಿಂದ ರಕ್ತದಾನಮಾಡಿ ಜೀವ ಉಳಿಸಿ

■ **ಹಂಪಿ ಟೈಮ್ಸ್ ಕೂಡ್ಲಿಗಿ**

ತಾಲೂಕಿನ ಆಲೂರು ಗ್ರಾಮದ ಶ್ರೀ ಶರಣಬಸವೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವಿಜಯನಗರ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರ ಆಲೂರು ಹಾಗೂ ಸ್ವಾಮಿ ವಿವೇಕಾನಂದ ರಕ್ತ ಬಂಡಾರದ ವತಿಯಿಂದ ಸಮೀಪದ ಶ್ರೀ ಶರಣಬಸವೇಶ್ವರ ದಾಸೋಹ ಮಠದ ದೇವಸ್ಥಾನದ ಆವರಣದಲ್ಲಿ ಮಂಗಳವಾರ ಸ್ವಯಂ ಪ್ರೇರಿತ ರಕ್ತದಾನ ಶಿಬಿರ ಜರುಗಿತು. ಶಿಬಿರದಲ್ಲಿ 62 ಕ್ಕೂ ಹೆಚ್ಚು ದಾನಿಗಳು ರಕ್ತದಾನ ಮಾಡಿದರು. >>4



## ಆನಂದ ಬಾಣ




## ಮಾನವ ಹಕ್ಕುಗಳ ಉಲ್ಲಂಘನೆಯಾಗದಂತೆ ಜಾಗೃತಿವಹಿಸಿ



■ **ಹಂಪಿ ಟೈಮ್ಸ್ ಕಂಪ್ಲಿ**

ಪ್ರತಿಯೊಬ್ಬರು ಕರ್ತವ್ಯ ನಿರ್ವಹಿಸುವಾಗ ಮಾನವ ಹಕ್ಕುಗಳ ಉಲ್ಲಂಘನೆಯಾಗದಂತೆ ಜಾಗೃತಿವಹಿಸಬೇಕು ಎಂದು ತಹಶೀಲ್ದಾರ್ ಎಸ್.ಶಿವರಾಜ ಹೇಳಿದರು.

ಇಲ್ಲಿನ ತಹಸೀಲ್ದಾರ ಸಭಾಂಗಣದಲ್ಲಿ ಮಂಗಳವಾರ ಮಾನವ ಹಕ್ಕುಗಳ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿ, ಮಾನವ ಹಕ್ಕುಗಳನ್ನು ಸಂಕ್ಷಿಸುವುದು ಸರ್ಕಾರದ ಪ್ರತಿನಿಧಿಯ ಆದ್ಯ ಕರ್ತವ್ಯವಾಗಿದೆ. ಪ್ರತಿಯೊಬ್ಬ ಪ್ರಜೆಯ ಮಾನವ ಹಕ್ಕುಗಳನ್ನು ರಕ್ಷಿಸುವುದು ರಾಜ್ಯ ಮತ್ತು ರಾಜ್ಯದ ಎಲ್ಲಾ ಸಂಘಸಂಸ್ಥೆಗಳ ಆದ್ಯ ಕರ್ತವ್ಯವಾಗಿದೆ ಎಂದರು. ತಹಸೀಲ್ದಾರರು ಮಾನವ ಹಕ್ಕುಗಳ ದಿನಾಚರಣೆಯ ಪ್ರತಿಜ್ಞಾವಿಧಿ ಬೋಧಿಸಿ, ಮಾನವ ಹಕ್ಕುಗಳ ಜಾಗೃತಿ, ರಕ್ಷಣೆ ಮತ್ತು ನೆರವು ಕುರಿತು ಮಾಹಿತಿ ನೀಡಿದರು. ತಾಪಂ ಇಒ ಆರ್.ಕೆ.ಶ್ರೀಕುಮಾರ್, ಪುರಸಭೆ ಮುಖ್ಯಾಧಿಕಾರಿ ಕೆ.ದುರುಗಣ್ಣ, ಉಪತಹಸೀಲ್ದಾರ ಬಿ.ರವೀಂದ್ರಕುಮಾರ್, ಆರ್.ಐ ಜಗದೀಶ, ಇಸಿಒ ಎಂ.ರೇವಣ್ಣ, ವೀರೇಶ್, ಗ್ರಾಮ ಆಡಳಿತ ಅಧಿಕಾರಿಗಳು ಸೇರಿ ನಾನಾ ಅಧಿಕಾರಿಗಳು ಇದ್ದರು.

## ಮಾಜಿ ಸಿಎಂ ಎಸ್.ಎಂ.ಕೃಷ್ಣ ನಿಧನ : ಕೊಪ್ಪಳ ವಿವಿಯಲ್ಲಿ ಶೋಕಾಚರಣೆ



■ **ಹಂಪಿ ಟೈಮ್ಸ್ ಕೊಪ್ಪಳ**

ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರ ನಿಧನದ ಹಿನ್ನೆಲೆ ಕೊಪ್ಪಳ ವಿಶ್ವವಿದ್ಯಾಲಯದಲ್ಲಿ ಮಂಗಳವಾರದಂದು ಶೋಕಾಚರಣೆಯನ್ನು ಮಾಡಲಾಯಿತು.

ಕನ್ನಡಿಗರ ರಾಜಧಾನಿ ಬೆಂಗಳೂರಿಗೆ 'ಐಟಿ' ತವರು ಎಂಬ ಬಿರುದು ಸಿಗಲು ಕಾರಣವಾಗಿದ್ದ ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರು ಇಂದು ನಮ್ಮನ್ನೆಲ್ಲಾ ಬಿಟ್ಟು ಅಗಲಿದ್ದಾರೆ. ಕರ್ನಾಟಕದ ಕೀರ್ತಿ ಪತಾಕೆಯನ್ನು ಆಧುನಿಕ ಕಾಲ ಘಟ್ಟದಲ್ಲಿ ಜಗತ್ತಿನ ಮೂಲೆ ಮೂಲೆಗೂ ಹಬ್ಬಿಸಿದ್ದ ಕೀರ್ತಿ, ಹೆಮ್ಮೆ ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರಿಗೆ ಸಲ್ಲಬೇಕಿದೆ ಎಂದು ಕುಲಸಚಿವ ಪ್ರೊ. ಕೆ.ವಿ.ಪ್ರಸಾದ್ ಸಂತಾಪ ವ್ಯಕ್ತಪಡಿಸಿರುವ.

ಕರ್ನಾಟಕದ ಸಿಎಂ ಆಗಿ, ಕರ್ನಾಟಕ ರಾಜ್ಯದಲ್ಲಿ ಹಲವಾರು ಅಭಿವೃದ್ಧಿ ಕೆಲಸಗಳನ್ನು ಮಾಡಿ ಜಾಗತಿಕ ಮಟ್ಟದಲ್ಲಿ, ಕನ್ನಡ ನಾಡು ಗುರುತಿಸಿಕೊಳ್ಳಲು ಕೊಡುಗೆ ನೀಡಿದ ಎಸ್.ಎಂ. ಕೃಷ್ಣ ಅವರು ಚಿಕಿತ್ಸೆ ಫಲಿಸದೆ ಇಹಲೋಕ ತ್ಯಜಿಸಿದ್ದು, ಕನ್ನಡ ನಾಡಿನ ಕೋಟಿ ಕೋಟಿ ಅಭಿಮಾನಿಗಳನ್ನ ಕೂಡ ಅಗಲಿ ಹೋಗಿದ್ದಾರೆ ಎಂದು ಸಹಾಯಕ ಪ್ರಾಧ್ಯಾಪಕರಾದ ಚಾಂದ್ ಬಾಷಾ ಸಂತಾಪ ಸೂಚಿಸಿದರು.

ಕಾರ್ಯಕ್ರಮದಲ್ಲಿ ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಪ್ರಕಾಶ ಯಳವಟ್ಟಿ ಮತ್ತು ಪ್ರವೀಣ ಪೊಲೀಸ್ ಪಾಟೀಲ್, ಜಗದೀಶ್, ಕುಮಾರ ನಾಯಕ್, ಅಯ್ಯಪ್ಪ, ಸಂತೋಷ ಕುಮಾರ, ಪಾರ್ವತಿ, ಬಾಷಾ ವಿರೂಪಾಕ್ಷ, ಪಾಪಣ್ಣ, ಶ್ರೀಕಂತ್, ಸುಧಾಕರ್,ಗೀತಾ ಪಾಟೀಲ್ ಸೇರಿದಂತೆ ವಿದ್ಯಾರ್ಥಿಗಳು ಇದ್ದರು.

## ಸ್ಟುಡೆಂಟ್ ಕಾಲಂ

# ಉದ್ಯಾನವನದಲ್ಲಿ ಚಿಟ್ಟೆ



ಒಂದು ದಿನ, ನಮ್ಮ ಆರನೇ ತರಗತಿಯ ಶಿಕ್ಷಕರು ನಮಗೆ ಉದ್ಯಾನವನಕ್ಕೆ ಹೋಗಲು ಅವಕಾಶ ನೀಡಿದರು. ಬೆಳಗಿನ ತಂಪು ಗಾಳಿಯಲ್ಲಿ ಹಸಿರು ಗಿಡಮರಗಳ ನಡುವೆ, ಚಿಮ್ಮುತ್ತಿರುವ ಹೂಗಳು, ತಳಿರು ಹಸಿರು ಹುಲ್ಲು, ಹಕ್ಕಿಗಳ ಕಲರವ ನಮ್ಮ ಮನಸ್ಸನ್ನು ಸಂತೋಷವಾಯಿತು.

ಎಲ್ಲರೂ ಸಂತೋಷದಿಂದ ಉದ್ಯಾನವನದಲ್ಲಿ ಓಡಾಡುತ್ತಾ, ಆಟ ವಾಡುತ್ತಾ ಇದ್ದಾಗ, ನಾನು ಅಲ್ಲಿ ಇದ್ದ ಹೂವಿನ ಮೇಲೆ ಗಮನವಿಟ್ಟೆ., ಹತ್ತಿರ ಹೋಗಿ ನೋಡಿದಾಗ ಅದು ಒಂದು ಸುಂದರ ಚಿಟ್ಟೆಯಿತ್ತು! ಅದರ ರೆಕ್ಕೆಗಳಲ್ಲಿದ್ದ ಬಣ್ಣಗಳು ಬೆರಗಿನಿಂದ ಹೊಳೆಯುತ್ತಿದ್ದು, ಅದು ಹೂವಿನ ಮಕರಂದವನ್ನು ಹೀರುತ್ತಿತ್ತು.

"ಹೇ ಚಿಟ್ಟೆ! ನಿನ್ನ ಹೆಸರು ಏನು?" ಎಂದು ನಾನು ಆಸಕ್ತಿಯಿಂದ ಕೇಳಿದೆ. ಅದಕ್ಕೆ ಚಿಟ್ಟೆ ಮೃದು ನಗೆಸುತ್ತಾ, "ನನ್ನನ್ನು ಪಾತರಗಿತ್ತಿ ಎಂದು ಕರೆಯುತ್ತಾರೆ," ಎಂದಿತು. ನಾನು ಅಚ್ಚರಿಯಿಂದ ಕೇಳಿದೆ, "ಓಹೋ! ನಿನ್ನಂತಹ ಚಂದದ ಚಿಟ್ಟೆ ನಾನು ಮೊದಲ ಬಾರಿಗೆ ನೋಡುತ್ತಿದ್ದೇನೆ. ನೀನು ಯಾವಾಗಲೂ ಇಲ್ಲೇ ಇರ್ತೀಯಾ?" ಅದಕ್ಕೆ ಚಿಟ್ಟೆ ಉತ್ತರಿಸಿತು, "ನಾನು ಹೂವಿನ ಹತ್ತಿರ ಇದ್ದೇ ಇರುತ್ತೇನೆ. ಮಕರಂದ ನನ್ನ ಆಹಾರ. ನಾನು ಬೇರೆ ಊಟ ತಿನ್ನುವುದಿಲ್ಲ." ನನಗೆ ತಕ್ಷಣ ಅದರ ಬಣ್ಣ ಬಣ್ಣದ ರೆಕ್ಕೆಗಳು ಮತ್ತು ಅದರ ಚಲನೆಯ ಕುರಿತು ಮತ್ತಷ್ಟು ಕೇಳಲು ಆಸೆ ಹೊಳೆಯಿತು. "ನೀನು ಹಾರಬಲ್ಲೆ? ನಿನ್ನ ಬಣ್ಣಗಳು ಎಷ್ಟು ಸುಂದರ!" ಎಂದೆ. ಚಿಟ್ಟೆ ಬೆರಗಾದಂತೆ ನನ್ನ ಕಡೆ ನೋಡಿ ಹೇಳಿತು, "ಹೌದು, ನನ್ನ ರೆಕ್ಕೆಗಳಿಂದ ನಾನು ಎಲ್ಲೆಲ್ಲೂ ಹಾರಬಹುದು. ಹಾರುವುದು ನನ್ನ ಜೀವನದ ಭಾಗ." ಇದರ ಮಧ್ಯೆ, ನಮ್ಮ ಶಿಕ್ಷಕರು ಮಕ್ಕಳು ಊಟದ ಸಮಯವಾಗಿದೆ ಎಂದು ಕರೆದರು.



ನಾನು ಚಿಟ್ಟೆಗೆ ಕೇಳಿದೆ, "ನೀನು ನಮ್ಮ ಜೊತೆಗೆ ಊಟಕ್ಕೆ ಬಾರೋದಿಲ್ಲವೇ?" ಆಗ ಚಿಟ್ಟೆ ನಗುತ್ತಾ, "ನೀವು ತಿನ್ನುವ ರೊಟ್ಟಿ, ಚಪಾತಿ, ಅನ್ನ, ಸಾಂಬಾರ್ ನನಗೆ ಬೇಕಾಗಿಲ್ಲ. ನಾನು ಹೂವಿನ ಮಕರಂದವನ್ನು ಮಾತ್ರ ತಿನ್ನುತ್ತೇನೆ," ಎಂದಿತು. "ಸರಿ, ನನ್ನಗೆ ಹೋಗಬೇಕಾಗಿದೆ," ಎಂದು ಹೇಳಿ ನಾನು ಅದಕ್ಕೆ ಒಂದು ಅಂತಿಮ ನೋಟ ಕೊಟ್ಟೆ. ಆಗ ಚಿಟ್ಟೆಯು ತನ್ನ ರೆಕ್ಕೆಗಳನ್ನು ಬಿಚ್ಚಿ, "ನಾನೂ ಹೋಗುತ್ತೇನೆ. ಬೈ!" ಎಂದು ಹೇಳಿ ಗಗನದತ್ತ ಹಾರಿತು. ಅದನ್ನು ಹಾರುತ್ತಾ ಹೋಗುವದು ನೋಡುತ್ತಿದ್ದಂತೆ, ನನ್ನ ಮನಸ್ಸಿನಲ್ಲಿ ಆ ದಿನದ ಸಂತೋಷದ ಹೊಳೆಯು ಹರಿಯಿತು. ಅಂದಿನ ಉದ್ಯಾನವನದಲ್ಲಿನ ನನ್ನ ಮತ್ತು ಚಿಟ್ಟೆಯ ನಡುವೆ ನಡೆದ ಈ ಚಿಕ್ಕ ಸಂಭಾಷಣೆಯು ನನಗೆ ಸದಾ ನೆನಪಾಗುತ್ತದೆ!

**■ ಪೂರ್ಣಿಮಾ.ಎಚ್.ಎಂ**
**6 ನೇತರಗತಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಗದ್ದಿಕೆರೆ**

## ಮಕ್ಕಳು ಅರಸರಾಗಬೇಕೆ?

**ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?**

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

### ಬೆಳಕಿನ ಹಾದಿ

ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು:**
**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**
**– ಜಾಹೀರಾತು ವ್ಯವಸ್ಥಾಪಕರು.**

# ಭಿಕ್ಷೆ ಜಾಲಕ್ಕೆ ಸಿಲುಕಿ ಬೆಂದ ಯುವತಿಯರು ಕಮರುತ್ತಿವೆ ಅಪ್ರಾಪ್ತ ಬಾಲಕಿಯರ ಕನಸು



ದೇವಸ್ಥಾನದ ಆವರಣದಲ್ಲಿ ಕುಳಿತು ಕುಟುಂಬದೊಂದಿದೆ ಊಟ ಮಾಡುತ್ತಿರುವಾಗ ಒಬ್ಬ ವಯಸ್ಕ ಮಹಿಳೆ ಬಂದು ಅಮ್ಮ ದಾನ ಮಾಡಿ ಎಂದಳು. ನಾವು ಊಟ ನೀಡಿದ್ದೆವು ಸ್ವಲ್ಪ ಸಮಯದ ನಂತರ ಇನ್ನೊಬ್ಬ ಮಹಿಳೆ ದಾನ ಮಾಡಿ ಎನ್ನುತ ಬಂದಳು, ಇನ್ನು ಸ್ವಲ್ಪ ಸಮಯದ ನಂತರ ಇನ್ನೊಬ್ಬ ಮಹಿಳೆ ಮಕ್ಕಳೊಂದಿಗೆ ಬಂದಳು ನಮಗೆ ಊಟ ಮಾಡಲು ಅವಕಾಶ ಸಿಗಲೇ ಇಲ್ಲ, ತುಂಬಾ ಕೋಪ ಬಂತು, ಯಾಕೆ ನಿಮಗೆ ಏನಾಗಿದೆ ನೀವು ವಯಸ್ಕರು, ಆರೋಗ್ಯವಂತ ಮಹಿಳೆಯರು ಯಾಕೆ ಬಿಕ್ಷೆ ಬೇಡುತ್ತಿದ್ದೀರಿ? ನಿಮಗೆ ಏನಾಗಿದೆ? ಮಕ್ಕಳಿಗೆ ಯಾಕೆ ಜೊತೆಗೆ ಕರೆದುಕೊಂಡು ಬಂದಿದ್ದೀರಿ ಎಂದು ಕೋಪದಿಂದ ಕೇಳಿದಾಗ, ಅದ್ಯಾವುದಕ್ಕೂ ಕ್ಯಾರೆ ಎನ್ನದೆ ದಾನಮಾಡಿ, ದಾನಮಾಡಿ ಎನ್ನುವ ಕೂಗು ಕೇಳಿಸುತ್ತಿತ್ತು. ವಿಚಿತ್ರ ಎಂದರೆ ಸ್ವಲ ಸಮಯದ ನಂತರ ಆಶ್ಚರ್ಯ ಎನ್ನುವಂತೆ ಒಳ್ಳೆಯ ಉಡುಪು ಧರಿಸಿಕೊಂಡು ಸುಮಾರು 10 ರಿಂದ 15 ವರ್ಷದ ಬಾಲಕಿಯರು ಒಳ್ಳೆಯ ಆಕರ್ಷಕ ಉಡುಗೆಯಲ್ಲಿ ಬಂದು ಹಣ ಹಾಗೂ ಊಟ ದಾನ ಮಾಡಿ ಎಂದು ಕೇಳುತ್ತಿದ್ದರು. ಸುಮಾರು 20 ರಿಂದ 30 ವರ್ಷದ ಮಹಿಳೆಯರು ಮಾತ್ರ ಬಿಕ್ಷೆ ಬೇಡುತ್ತಿದ್ದರು, ಇವರು ವಿವಾಹಿತ ಅವಿವಾಹಿತ ಮಹಿಳೆಯರು ಅಂತ್ತಾನು ಗೊತ್ತಾಗುತ್ತಿರಲಿಲ್ಲ, ಕೆಲವು ಮಹಿಳೆಯರ ಕೊರಳಲ್ಲಿ ತಾಳಿಯು ಇರಲಿಲ್ಲ ಆದರೆ ಇವರ ಜೊತೆಗೆ ಇರುವ ಮಕ್ಕಳು ಯಾರು? ಇವರ ಆ ಮಕ್ಕಳಲ್ಲಿ ಕೆಲವು ಮಕ್ಕಳು ಘಂಟೆಗಟ್ಟಲೆ ನಿದ್ರಾಹೀನ ಸ್ಥಿತಿಯಲ್ಲಿಯೆ ಇದ್ದವು, ಆ ಮಗು ಯಾವಾಗ ಎಳೋದು? ಆ ತಾಯಿಗೆ ಆ ಮಗುವಿಗೆ ಊಟ ಮಾಡಿಸುವ ಚಿಂತೆಯಾಗಲಿ, ನೀರು ಕೂಡಿಸುವ ಕಾಳಜಿಯಾಗಲಿ ಕಾಣುತ್ತಿರಲ್ಲಿ, ಒಟ್ಟಾರೆ ಅಲ್ಲಿ ಮಕ್ಕಳೊಂದಿಗೆ ಭಿಕ್ಷೆಗೆ ಬಂದ ಮಹಿಳೆ ಹಾಗೂ ಮಕ್ಕಳ ನಡುವೆ ಯಾವುದೇ ಬಾಂಧವ್ಯ ಕಾಣುತ್ತಿರಲಿಲ್ಲ. ವಿಪರ್ಯಾಸ ಅಂದರೆ ಆ ಅಪ್ರಾಪ್ತ ಬಾಲಕಿಯರ ಪರಿಸ್ಥಿತಿ. ಎಷ್ಟೆ ಬಡತನವಿರಲಿ ಹಡೆದ ತಂದೆ ತಾಯಿಗಳು ತಮ್ಮ ಮಕ್ಕಳಿಗೆ ಅದರಲ್ಲೂ ಅಪ್ರಾಪ್ತ ಬಾಲಕಿಯರಿಗೆ ಭಿಕ್ಷೆ ಬೇಡಲು ಬಿಡುತ್ತಾರೆಯೇ? ಆ ಮಗುವಿನ ಶಿಕ್ಷಣ, ಅವಳ ಭವಿಷ್ಯದ ಬಗ್ಗೆ ಚಿಂತಿಸುವುದಿಲ್ಲವೆ? ಎನ್ನುವ ಮಾತುಗಳು ಕೇಸುತ್ತಿದವು.

ಖಂಡಿತವಾಗಿಯೂ ಇಲ್ಲ, ಇದು ಏನೊ ಒಂದು ನಿಗೂಢ ಜಾಲ ಇದೆ ಎನಿಸುತ್ತದೆ, ಆ ಬಾಲಕಿಯರಿಗೆ ಪ್ರಾದೇಶಿಕ ಭಾಷೆಯಲ್ಲಿ ಮಾತನಾಡಲು ಬರುತ್ತಾ ಇರಲಿಲ್ಲ, ಅವರ ಸೌಂದರ್ಯ ಹಾಗೂ ಮಾರು ಹೋಗುವ ಉಡಿಗೆ ತೋಡಿಗೆ ಇದ್ದರೂ ಕೂಡ ಅವರ ಮುಖದಲ್ಲಿ ಉಲ್ಲಾಸ ಇಲ್ಲದ ಭಯದ ಛಾಯೆ ಎದ್ದು ಕಾಣುತ್ತಿತ್ತು. ಬಹುಶಃ ಇವರು ಹೊರರಾಜ್ಯ ಹಾಗೂ ವಿದೇಶಗಳಿಂದ ಅಪಹರಿಸಲ್ಪಟ್ಟ ಮಹಿಳೆ ಯರು ಹಾಗೂ ಮಕ್ಕಳು ಇರಬಹುದು. ಆದರೆ ಈ ರೀತಿಯ ಬಿಕ್ಷಾಟನೆಯಲ್ಲಿ ತೊಡಗಿದ ಮಹಿಳೆಯರ ಈ ಸ್ಥಿತಿಗೆ ಕಾರಣ ಏನಿರಬಹುದು? ಅಪ್ರಾಪ್ತ ಬಾಲಕಿಯರ ಭವಿಷ್ಯದ ಗತಿ ಎನು? ಹೆಣ್ಣು ಮಕ್ಕಳೇ ಟಾರ್ಗೆಟ್ ಯಾಕೆ? ಹಗಲಲ್ಲಿ ಭಿಕ್ಷೆ ಬೇಡುವ ಅಪ್ರಾಪ್ತ ಬಾಲಕಿಯರ ವಸತಿ ನೆಲೆಗಳು ಎಲ್ಲಿ ಇದಾವೆ? ಇವರು ರಾತ್ರಿಯಲ್ಲೂ ಸುರಕ್ಷಿತ ವಾಗಿ ಇರುತ್ತಾ ರೆಯೇ? ಎನ್ನುವ ಪ್ರಶ್ನೆಗಳು ಅಲ್ಲಿದ್ದ ವರಲ್ಲೆ ಚರ್ಚೆಗೀಡಾಗಿ ಕಾಡತೊಡಗಿದವು.



ನಂದಿನಿ ಸನಬಾಲ್
ಶಿಕ್ಷಕಿ, ಗುಲ್ಬರ್ಗಾ

Scan For Digital Colourful
HAMPI TIMES E-paper

ಪ್ರಗತಿಯತ್ತ ಸಾಗುತ್ತಿರುವ ನಮ್ಮ ಭಾರತ ದೇಶದಲ್ಲಿ ಹೆಣ್ಣಿಗೆ ಪೂಜ್ಯನೀಯ ಸ್ಥಾನವಿದೆ, ಅಡುಗೆ ಮನೆಯಿಂದ ಹಿಡಿದು ಅಂತರೀಕ್ಷದವರೆಗೂ ಮಹಿಳೆಯರು ತಮ್ಮ ಛಾಪನ್ನು ಮೂಡಿಸಿ ದೇಶದ ಪ್ರಗತಿಗೆ ಕಾರಣಿಕರ್ತರು ಎನ್ನುವ ದಿಸೆಯಲ್ಲಿ ತಮ್ಮ ಅಪ್ರತಿಮ ಸೇವೆ ಮಾಡುತ್ತಿದ್ದು, ಇತ್ತೀಚಿನ ದಿನಗಳಲ್ಲಿ ಈ ರೀತಿಯಲ್ಲೂ ಮಹಿಳೆಯರು ಹಾಗೂ ಮಕ್ಕಳು ಹಾಡುಹಗಲೇ ಭಿಕ್ಷೆ ಬೇಡುತ್ತಿರುವುದು ಯಾರ ಗಮನಕ್ಕೂ ಬರುತ್ತಿಲ್ಲವೇ? ಸ್ಥಳೀಯ ಸಂಸ್ಥೆಗಳು, NGO ಗಳು ಸರಕಾರ ಹಾಗೂ ಮಹಿಳಾ ಆಯೋಗಗಳ ಗಮನಕ್ಕೆ ಬಂದಿಲ್ಲವೇ? ಇದು ಹೇಗೆ ಸಾಧ್ಯ? ಅನಾಥರನ್ನು ನಿರ್ಗತಿಕರನ್ನು ಅನಾಥಾಶ್ರಮಕ್ಕೆ ಸೇರಿಸಬಹುದು, ಅವರಿಗೆ ಗುರುತಿಸಿ ಅವರ ಈ ಪರಿಸ್ಥಿತಿಗೆ ಕಾರಣ ಹುಡುಕಬಹುದಲ್ಲವೆ.?

ಅನಾಥರು, ನಿರ್ಗತಿಕರು, ಅಸಹಾಯಕರು ಭಿಕ್ಷೆ ಬೇಡಿ ಜೀವನ ಸಾಗಿಸುವುದು ಸರ್ವೇಸಾಮಾನ್ಯ, ಆದರೆ ವಯಸ್ಕ ಮಹಿಳೆಯರು ಅಪ್ರಾಪ್ತ ಬಾಲಕಿಯರು ಭಿಕ್ಷೆ ಬೇಡುವುದು ಇದು ಒಂದು ದೊಡ್ಡ ಜಾಲ ಇರಬಹುದು. ಮಕ್ಕಳು ಹಾಗೂ ನಿರ್ಗತಿಕ ಮಹಿಳೆಯರಿಗೆ ಗುರಿಯಾಗಿಸಿಕೊಂಡು ನಡೆಯುತ್ತಿರುವ ದೌರ್ಜನ್ಯ ಹಗಲು ಭಿಕ್ಷಾಟನೆ ರಾತ್ರಿ ವೇಶ್ಯಾವಾಟಿಕೆಯಲ್ಲಿ ಇವರನ್ನು ಬಳಸುತ್ತಿರಬಹುದು ಎನ್ನುವ ಪಿಸು ಮಾತುಗಳು, ಚರ್ಚೆಗಳು ಕೇಳಿಬರುತ್ತಿವೆ, ಹೆಣ್ಣಿನ ಪರಿಸ್ಥಿತಿ ಯಾವ ಮಟ್ಟಿಗೆ ತಲುಪಿದೆ? ತಂದೆ ತಾಯಿಯ ಆಸರೆಯಲ್ಲಿ ಅವರ ಮಮತೆ ವಾತ್ಸಲ್ಯ ಪ್ರೀತಿಯೊಂದಿಗೆ ಬಾಳಿ ಬದುಕು ಕಟ್ಟಿಕೊಳ್ಳುವ ಅಪ್ರಾಪ್ತೆಯರ ಬದುಕು ಹೀಗೆ ಆದರೆ ಹೆಣ್ಣಿಗೆ ಉಳಿಗಾಲ ಎಲ್ಲಿದೆ? ಎನ್ನುವ ಆತಂಕಕಾರಿ ಚರ್ಚೆಗಳು ದೇವಸ್ಥಾನಕ್ಕೆ ಬಂದ ಭಕರಲ್ಲಿ ನಡೆಯುತ್ತಿದ್ದವು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸೇವೆಗಳಲ್ಲಿ ಮಕ್ಕಳು ಮತ್ತು ಮಹಿಳೆಯರ ರಕ್ಷಣೆಗಾಗಿ ಇರುವ ಕೆಲವು ಸೇವೆಗಳು ಹೀಗೆ ಇವೆ

**ಬಾಲ ಸ್ನೇಹಿ ಯೋಜನೆ**
**ಪ್ರಾಯಪೂರ್ವ ಬಾಲಕಿಯರ ಸುರಕ್ಷೆ,**
**ರಾಜ್ಯ ಮಹಿಳಾ ನಿಲಯ,**
**ನಿರ್ಗತಿಕ ಮಕ್ಕಳ ಕುಟೀರ ಯೋಜನೆಗಳು,**
**ಬೇಟಿ ಪಡಾವೋ ಬೇಟಿ ಬಚಾವೋ ಸಾಂತ್ವನ ಯೋಜನೆ,**
**ಬಾಲಕಿಯರ ವಸತಿ ನಿಲಯ,**
**ಟ್ರಾನ್ಸಿಟಲ್ ಹಾಸ್ಟೆಲ್ ಯೋಜನೆ ,**
**ಸ್ವಾಧರ ಗೃಹ,**
**ಸಖೀ ಒನ್ ಸ್ಟಾಪ್ ಸೆಂಟರ್,**
**ಯೂನಿವರ್ಸಲೈಸೇಷನ್ ಆಫ್ ವುಮನ್ ಹೆಲ್ಪ್ ಲೈನ್ – 181,**
**ರಾಜ್ಯ ಮಕ್ಕಳ ರಕ್ಷಣಾ ಸೊಸೈಟಿ,**
**ಜಿಲ್ಲಾ ಮಕ್ಕಳ ರಕ್ಷಣಾ ಘಟಕ,**
**ಬಾಲ ಮಂದಿರಗಳು,**
**ಅರ್ಹ ಸಂಸ್ಥೆಗಳು,**
**ವೀಕ್ಷಣಾಲಯಗಳು,**
**ವಿಶೇಷ ಗೃಹಗಳು,**
**ಅನುಪಾಲನಾ ಸೇವೆಗಳು**
**ಅದರಲ್ಲಿಯೂ ಕಾಣೆಯಾದ ಮಕ್ಕಳ ಬ್ಯುರೋ (missing child bureau)**


ಇನ್ನೂ ಅನೇಕ ಸೇವೆಗಳು ಇದಾವೆ

ಇವುಗಳ ನಡುವೆ ಇಂತಹ ಆತಂಕಕಾರಿ ಘಟನೆಗಳು ಹೆಣ್ಣು ಹೊತ್ತ ಪಾಲಕರ ನಿದ್ದೆ ಕೆಡಿಸಿದೆ ಎನ್ನುವ ಮಾತುಗಳು ಹಾಗೂ ಈ ವಾತಾವರಣ ಪಾಲಕರಲ್ಲಿ ಭಯ ಸೃಷ್ಟಿ ಮಾಡಿದೆ..

ಒಮ್ಮೆ ಈ ಸಮಸ್ಯೆಯ ಬಗ್ಗೆ ದಯವಿಟ್ಟು ಎಲ್ಲ ಸಂಘ ಸಂಸ್ಥೆಗಳು ಮಕ್ಕಳು ಹಾಗೂ ಅದರಲ್ಲೂ ಹೆಣ್ಣು ಮಕ್ಕಳ ರಕ್ಷಣೆಗೆ ಕೈ ಜೋಡಿಸಬೇಕು. ■

# ಹಳೆಯ ಆಚರಣೆಗಳು ಇಂದಿನ ಬದುಕಿಗೆ ಅಡಚಣೆಯೇ?

■ ಚೇತನ ಭಾರ್ಗವ, ಬೆಂಗಳೂರು



ಹಳೆಯ ಆಚರಣೆಗಳು ಸಂತೋಷ, ಹುಮ್ಮಸು, ಉತ್ಸಾಹ ಸಡಗರ ಸಂಭ್ರಮ ವನ್ನು ತಂದು ಕೊಡುತ್ತದೆ. ಹಳೆಯ ಆಚರಣೆಗಳು ನಮ್ಮ ಸಂಸ್ಕೃತಿಯನ್ನು ಪ್ರತಿ ಬಿಂಬಿಸುತ್ತದೆ. ಹಳೆಯ ಕಾಲದ ಆಚರಣೆಗಳಲ್ಲಿ ವೈಜ್ಞಾನಿಕವಾದ ಕಾರಣಗಳು ಇರು ತ್ತದೆ. ಹಬ್ಬಗಳನ್ನು ಆಚರಿಸುವ ಸಮಯದಲ್ಲಿ ನಾವು ಮಾವಿನ ಎಲೆಗಳನ್ನು ತಳಿರು ತೋರಣಗಳನ್ನು ಮನೆಯ ಬಾಗಿಲಿಗೆ ಕಟ್ಟುತ್ತೇವೆ. ವೈಜ್ಞಾನಿಕವಾಗಿ ಹಸಿರಾದ ಮಾವಿನ ಎಲೆಗಳನ್ನು ಮನೆಯ ಮುಂಭಾಗದಲ್ಲಿ ಹಾಕುವುದರಿಂದ ಶುದ್ಧವಾದ ಗಾಳಿ ಮನೆಯೊಳಗೆ ಪ್ರವೇಶಿಸುತ್ತದೆ.ಮತ್ತು ತಂಪಾದ ಅನುಭವವನ್ನು ನೀಡುತ್ತದೆ.

ಹಿಂದಿನ ಕಾಲದ ಹಬ್ಬಗಳ ಆಚರಣೆಗಳು ಸಂಬಂಧ ಮತ್ತು ಬಾಂಧವ್ಯವನ್ನು ಹೆಚ್ಚಿಸುತಿತ್ತು. ಸಂಸಾರದ ಒಗ್ಗಟ್ಟನ್ನು ಬಲಪಡಿಸುತ್ತಿತ್ತು. ಗೌರಿ ಗಣೇಶ, ದೀಪಾವಳಿ, ನಾಗರಪಂಚಮಿ, ಕೃಷ್ಣ ಜನ್ಮಾಷ್ಟಮಿ, ನವರಾತ್ರಿ ಹಿಂದುಗಳು ಆಚರಿಸುವ ಪ್ರಮುಖ ಹಬ್ಬಗಳು. ಈ ಹಬ್ಬಗಳಿಗೆ ಕೆಲಸದ ನಿಮಿತ್ತ ನಗರದಲ್ಲಿ ವಾಸಿಸುತ್ತಿದ್ದವರು ತಮ್ಮ ಮೂಲ ಮನೆಗೆ ಬಂದು ಹೆತ್ತವರೊಂದಿಗೆ, ಸಹೋದರ, ಸಹೋದರಿಯರೊಂದಿಗೆ ಸಂತೋಷ ಸಂಭ್ರಮ ದಿಂದ ಹಬ್ಬಗಳನ್ನು ಆಚರಿಸುತ್ತಿದ್ದರು. ಇಲ್ಲಿ ಧಾರ್ಮಿಕ ಆಚರಣೆಯೊಂದಿಗೆ ಭಕ್ತಿ ಭಾವ ಪ್ರಧಾನ ವಾಗಿರುತ್ತದೆ. ಸಂಪ್ರದಾಯಗಳನ್ನು ಆಚರಿಸುತ್ತಿದ್ದರು. ನಮ್ಮ ಜೀವನದಲ್ಲಿ ಶಿಸ್ತು ಮೂಡಿಸಲು ಹಾಗೂ ನಮ್ಮ ಮನಸ್ಸನ್ನು ಪ್ರಶಾಂತವಾಗಿಟ್ಟು ಮನದಲ್ಲಿ ಶ್ರದ್ಧೆ ಭಕ್ತಿ ಮೂಡಿಸುವ ಸಲುವಾಗಿ ನಮ್ಮ ಪೂರ್ವಜರು ಸಂಪ್ರದಾಯ ಕಟ್ಟು ಪಾಡು ಗಳನ್ನು ರೂಪಿಸಿದ್ದರು. ಹಳೆಯ ಆಚರಣೆಯ ಪದ್ಧತಿಯು ಮುಂದಿನ ಪೀಳಿಗೆಯ ಮಕ್ಕಳ ನಡುವೆ ಅನ್ಯೋನ್ಯತೆ ಪ್ರೀತಿ ಬೆಸೆಯಲು ಅನುವು ಮಾಡಿಕೊಡುತ್ತದೆ.

ಹಳೆಯ ಕಾಲದಲ್ಲಿ ಆಚರಿಸುವ ಪ್ರತಿಯೊಂದು ಆಚರಣೆಗೂ ಅದರದೇ ಆದ ಮಹತ್ವ ಮತ್ತು ವೈಜ್ಞಾನಿಕವಾದ ಕಾರಣಗಳಿವೆ. ಹಬ್ಬಗಳು ನಮ್ಮ ಸಂಸ್ಕೃತಿಯ ಸೌಂದರ್ಯವನ್ನು ಪ್ರತಿಬಿಂಬಿಸುತ್ತದೆ. ನಮ್ಮೆಲ್ಲರ ಅಭ್ಯುದಯಕ್ಕಾಗಿ ಹಿರಿಯರು ಹಬ್ಬಗಳ ಆಚರಣೆಗಳನ್ನು ನಮ್ಮ ಜೀವನದಲ್ಲಿ ಹಾಸು ಹೊಕ್ಕಾಗಿಸಿದ್ದಾರೆ. ಈಗಿನ ಕಾಲದಲ್ಲಿ ಹಿಂದೂ ಸಂಸ್ಕೃತಿಯ ಪ್ರತೀಕವಾದ ಹಳೆಯ ಆಚರಣೆಗಳು ಅದರ ಶ್ರದ್ಧೆ ಕಳೆದುಕೊಂಡಿರುವುದು ವಿಪರ್ಯಾಸ. ಬದಲಾದ ಜೀವನ ಶೈಲಿಯಲ್ಲಿ , ಒತ್ತಡದ ಬದುಕಿನಲ್ಲಿ ಆಚರಣೆಗಳು ನವ ಚೈತನ್ಯವನ್ನು ತಂದುಕೊಡುವುದು. ಅದರ ಹಿಂದಿರುವ ವೈಜ್ಞಾನಿಕ ಮಹತ್ವ ಅರಿತು ನಾವೆಲ್ಲಾ ಒಟ್ಟಾಗಿ ಆಚರಿಸಿದರೆ ಸಂಬಂಧಗಳ ಸೌಹಾರ್ದತೆ ಹೆಚ್ಚಾಗುತ್ತದೆ. ಬದುಕು ಉಲ್ಲಾಸಮಯವಾಗುತ್ತದೆ.

ಹಿಂದಿನ ಕಾಲದಲ್ಲಿ ಕೂಡು ಕುಟುಂಬಗಳು ಹೆಚ್ಚಾಗಿ ಕಂಡು ಬರುತ್ತಿದ್ದವು. ಮನೆಯ ತುಂಬಾ ಜನರು ಇರುತ್ತಿದ್ದರು. ಕೆಲಸಗಳನ್ನು ಮನೆಯ ಸದಸ್ಯರೆಲ್ಲರೂ ಸೇರಿ ಹಂಚಿಕೊಂಡು ಮಾಡುತ್ತಿದ್ದರು. ಆಚರಣೆಗಳನ್ನು ಮತ್ತು ಪದ್ಧತಿಗಳನ್ನು ಎಲ್ಲರೂ ಸೇರಿ ಆಚರಿಸುತ್ತಿದ್ದರು, ಆಗ ಯಾರೊಬ್ಬರಿಗೂ ಅದು ಹೊರೆಯೆಂದು ಅನಿಸುತ್ತಿರಲಿಲ್ಲ. ಆದರೆ ಇಂದಿನ ದಿನಗಳಲ್ಲಿ ಕುಟುಂಬಗಳು ಚಿಕ್ಕದಾಗಿದೆ. ಒಬ್ಬರಿಂದ ಅಥವಾ ಇಬ್ಬರಿಂದ ಎಲ್ಲಾ ಆಚರಣೆಗಳನ್ನು ಸಂಭಾಳಿಸಿಕೊಂಡು ಹೋಗುವುದು ಕಷ್ಟಕರವಾಗಿದೆ. ಕಾಲ ಬದಲಾದಂತೆ ನಾವು ಕೂಡ ಸಕಾರಾತ್ಮಕವಾಗಿ ಬದಲಾಗುವುದು ಅನಿವಾರ್ಯ. ಇಂದಿನ ಆಧುನಿಕ ಯುಗದಲ್ಲಿ ಕಟ್ಟುನಿಟ್ಟಾಗಿ ಹಳೆಯ ಆಚರಣೆಗಳನ್ನು ಪಾಲಿಸಿಕೊಂಡು ಹೋಗಲು ಸಾಧ್ಯವಾಗುವುದಿಲ್ಲ. ರುಬ್ಬು ಕಲ್ಲಿನಲ್ಲಿ ಅಡುಗೆಗೆ ಮಸಾಲೆಯನ್ನು ರುಬ್ಬಿದರೆ ಅಡುಗೆಯ ರುಚಿ ಚೆನ್ನಾಗಿರುತ್ತದೆಯೆಂದು, ಇಂದು ಕೂಡ ಅದೇ ರೀತಿ ರುಬ್ಬಲು ಸಾಧ್ಯವಿಲ್ಲ. ತಂತ್ರಜ್ಞಾನ ಮುಂದುವರಿದಂತೆ ನಾವು ಅದಕ್ಕೆ ತಕ್ಕಂತೆ ಬದಲಾಗಬೇಕು.

ಹಳೆಯ ಆಚರಣೆಯ ಪ್ರಕಾರ ಮಹಿಳೆಯರಿಗೆ ತಿಂಗಳಿಗೆ ಮೂರು ದಿವಸ ಮನೆಯ ಒಳಗೆ ಪ್ರವೇಶವಿರುತ್ತಿರಲಿಲ್ಲ. ಅವರಿಗೆ ವಿಶ್ರಾಂತಿ ಕೊಡುವ ದೃಷ್ಟಿಯಿಂದ ಈ ಆಚರಣೆ ಮಾಡುತ್ತಿದ್ದರು ಎಂದು ನನಗೆ ಅನಿಸುತ್ತದೆ. ಹಿಂದಿನ ಕಾಲದಲ್ಲಿ ಮಿಕ್ಸಿ ಗ್ರೈಂಡರ್‌ಗಳ ವ್ಯವಸ್ಥೆ ಇರಲಿಲ್ಲ. ಭತ್ತ ವನ್ನು ಕುಟ್ಟಬೇಕಿತ್ತು, ಅಕ್ಕಿಯನ್ನು ಬೀಸಬೇಕಿತ್ತು. ಈ ಎಲ್ಲ ಕೆಲಸಗಳನ್ನು ಮಾಡಲು ಮಹಿಳೆಯರಿಗೆ ದೈಹಿಕ ವಾಗಿ ಶ್ರಮವಾಗುತ್ತಿತ್ತು. ಆ ಸಮಯದಲ್ಲಿ ಮಹಿಳೆಯರು ಸ್ವಲ್ಪ ನಿಶಕ್ತರಾಗಿರುತ್ತಾರೆ. ಹಾಗಾಗಿ ಅವರಿಗೆ ವಿಶ್ರಾಂತಿ ನೀಡುವ ಸಲುವಾಗಿ ಹಾಗೂ ಸ್ವಚ್ಛತೆಯ ದೃಷ್ಟಿಯಿಂದ ಅವರನ್ನು ಮನೆಯಿಂದ ಹೊರಗೆ ಕೂರಿಸುತ್ತಿದ್ದರು. ಅಲ್ಲದೇ ಆ ಕಾಲದಲ್ಲಿ ಕೂಡು ಕುಟುಂಬಗಳೇ ಹೆಚ್ಚಾಗಿ ಕಂಡು ಬರುತ್ತಿದ್ದರಿಂದ ಮನೆಯಲ್ಲಿ ದಿನನಿತ್ಯದ ಕೆಲಸವನ್ನು ಮಾಡಲು ಮನೆಯ ಇತರೆ ಸದಸ್ಯರು ಇರುತ್ತಿದ್ದರು. ಆದರೆ ಇಂದಿನ ದುಬಾರಿ ದುನಿಯಾದಲ್ಲಿ ಹೆಣ್ಣು ಮತ್ತು ಗಂಡು ಇಬ್ಬರೂ ದುಡಿಯುವುದು ಅತ್ಯಗತ್ಯವಾಗಿದೆ. ಹಾಗಾಗಿ ಈಗಿನ ಕಾಲದಲ್ಲಿ ಆ ರೀತಿ ಮಾಡಲು ಸಾಧ್ಯವಿಲ್ಲ. ಅದು ಮಹಿಳೆಯರಿಗೆ ತಿಂಗಳಲ್ಲಿ ಆಗುವ ಸಹಜ ಪ್ರಕ್ರಿಯೆ ಅಷ್ಟೇ. ಇಂದಿನ ಮಹಿಳೆ ಯರಿಗೆ ಸ್ವಚ್ಛತೆಯ ಬಗ್ಗೆ ಅರಿವು ಇದೆ ಹಾಗೂ ಹಿಂದಿನ ಕಾಲದ ರೀತಿಯಲ್ಲಿ ದೈಹಿಕ ಶ್ರಮಪಟ್ಟು ಮಾಡುವ ಕೆಲಸಗಳು ಇಲ್ಲದಾಗಿದೆ. ಇಂದಿನ ಜೀವನ ಶೈಲಿಯಲ್ಲಿ ಮಹಿಳೆಯರು ತಿಂಗಳಲ್ಲಿ ಮೂರು ದಿವಸ ಹೊರಗೆ ಕುಳಿತರೆ ಉಪವಾಸವೇ ಇರಬೇಕಾಗುತ್ತದೆ. ಬೆಂಗಳೂರಿನಂತ ಮಹಾನಗರದಲ್ಲಿ ಉದ್ಯೋಗಕ್ಕಾಗಿ ಮನೆಯಿಂದ ಬೆಳಗ್ಗೆ ಹೋದ ಮನೆಯ ಸದಸ್ಯರು ಈ ಟ್ರಾಫಿಕ್ ಜಂಜಾಟದಿಂದ ಮನೆಗೆ ಬಂದು ಸೇರುವಾಗ ರಾತ್ರಿಯೇ ಆಗುವುದು ಸರಿ. ಮಹಿಳೆಯರು ಕೂಡ ಹೊರಗೆ ಹೋಗಿ ಪುರುಷರಸರಿಸಮಾನವಾಗಿದುಡಿಯುವುದರಿಂದಾಗಿ ಈ ರೀತಿಯ ಆಚರಣೆಗಳು ಇಂದಿನ ಬದುಕಿಗೆ ಅಡಚಣೆಯೇ ಆಗುತ್ತದೆ. ಹಳೆಯ ಆಚರಣೆಗಳ ಮೂಲ ಉದ್ದೇಶಗಳನ್ನು ಸರಿಯಾಗಿ ತಿಳಿದುಕೊಂಡು, ಅಸಂಬಂಧಿತ ಆಚರಣೆಯನ್ನು ತಿದ್ದುಪಡಿ ಮಾಡಿಕೊಂಡು, ನಮ್ಮ ಪರಂಪರೆ ಮತ್ತು ಆಧುನಿಕತೆಯ ಸಮತೋಲ ನೆಯನ್ನು ಕಾಪಾಡಿಕೊಳ್ಳುತ್ತಾ, ನಮ್ಮ ಹಳೆಯ ಆಚರಣೆ ಮತ್ತು ಸಂಪ್ರದಾಯದ ಮಹತ್ವವನ್ನು ಮುಂದಿನ ಪೀಳಿಗೆಗೆ ತಿಳಿಸುತ್ತಾ, ಅದರ ಬಗ್ಗೆ ಅರಿ ವನ್ನು ಮೂಡಿಸುವುದು ಉತ್ತಮ. ಹಳೆಯ ಆಚರಣೆಗಳನ್ನು ಪ್ರಸ್ತುತ ದಿನಕ್ಕೆ ಅಡಚಣೆ ಯಾಗದಂತೆ ಆಚರಿಸಬೇಕೆಂಬುದೇ ಈ ಲೇಖನದ ಆಶಯ.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055




## ನಿತ್ಯ ಪಂಚಾಂಗ

ಮಾಸ: ಮಾರ್ಗಶೀರ । ಸಂವತ್ಸರ: ಕ್ರೋಧಿ

**11–12–2024 – ಬುಧವಾರ**

| | |
|---|---|
| ತಿಥಿ | : ಏಕಾದಶಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ರೇವತಿ |
| ಯೋಗ | : ವರಿಯಾಣ |
| ಕರಣ | : ವಾಣಿಜ |
| ಸೂರ್ಯೋದಯ | : 06:59:27 |
| ಸೂರ್ಯಾಸ್ತ | : 17:41:17 |
| ರಾಹು ಕಾಲ | : 12:20–13:41 |
| ಯಮಘಂಡ ಕಾಲ | : 08:20–09:40 |
| ಗುಳಿಕ ಕಾಲ | : 11:00–12:20 |



## ತುಂಗಭದ್ರಾ ನೀರಿನ ಮಟ್ಟ

ಮಂಗಳವಾರ : 10–12–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1629.41 ಅಡಿ |
| ಒಳ ಹರಿವು | 3624 ಕ್ಯುಸೆಕ್ |
| ಹೊರ ಹರಿವು | 5173 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 91.87 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| ಕಳೆದ ವರ್ಷ ಇದೇ ದಿನ | |
| ಇಂದಿನ ಮಟ್ಟ | 1591.50 ಅಡಿ |
| ಒಳ ಹರಿವು | 694 ಕ್ಯುಸೆಕ್ |
| ಹೊರ ಹರಿವು | 2490 ಕ್ಯುಸೆಕ್ |
| ಸಾಮರ್ಥ್ಯ | 12.33 ಟಿಎಂಸಿ |

### ಮಾನವ ಹಕ್ಕುಗಳ ದಿನಾಚರಣೆ ಕಾರ್ಯಕ್ರಮದಲ್ಲಿ ನ್ಯಾ. ಮಹಾಂತೇಶ ದರಗದ ಹೇಳಿಕೆ

# ಮಾನವ ಹಕ್ಕುಗಳ ಬಗ್ಗೆ ಎಲ್ಲರೂ ಅರಿವು ಹೊಂದಿರಬೇಕು

■ **ಹಂಪಿ ಟೈಮ್ಸ್ ಕೊಪ್ಪಳ**

ಮಾನವ ಹಕ್ಕುಗಳು ಸಮಾಜದ ಪ್ರತಿಯೊಬ್ಬ ನಾಗರಿಕನಿಗೂ ಸಮಾನ ಅವಕಾಶಗಳನ್ನು ನೀಡಿದ್ದು, ಮಾನವ ಹಕ್ಕುಗಳ ಬಗ್ಗೆ ಎಲ್ಲರೂ ಅರಿವು ಹೊಂದಿರಬೇಕು ಎಂದು ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಕೊಪ್ಪಳ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಮಹಾಂತೇಶ ಎಸ್ ದರಗದ ಹೇಳಿದರು.

ಅವರು ಮಂಗಳವಾರ ನಗರದ ಸಾಹಿತ್ಯ ಭವನದಲ್ಲಿ ಕೊಪ್ಪಳ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾಡಳಿತ ಹಾಗೂ ಜಿಲ್ಲಾ ಪಂಚಾಯತ್ ಇವರ ಸಂಯುಕ್ತಾಶ್ರಯದಲ್ಲಿ ನಡೆದ ಮಾನವ ಹಕ್ಕುಗಳ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಪ್ರತಿಯೊಬ್ಬರೂ ಶುದ್ಧ ಕುಡಿಯುವ ನೀರು, ಗಾಳಿ ಹಾಗೂ ಪರಿಸರವನ್ನು ಪಡೆದುಕೊಂಡು ಗೌರವಯುತವಾಗಿ ಬಾಳುವ ಹಕ್ಕನ್ನು ಹೊಂದಿದ್ದಾರೆ. ಮನುಷ್ಯನು ಜೀವಿಸುವುದಕ್ಕಾಗಿ ಸಂವಿಧಾನದಲ್ಲಿ ಮಾತನಾಡುವ ಹಕ್ಕು, ಧರ್ಮ ಆಚರಣೆ ಮಾಡುವ ಹಕ್ಕು ಹೀಗೆ ಹಲವಾರು ಹಕ್ಕುಗಳನ್ನು ನೀಡಲಾಗಿದೆ. ಮನುಷ್ಯ ಮನ್ಯಷ್ಯನಾಗಿ ಮತ್ತು ಗೌರವಯುತವಾಗಿ ಬದುಕುವುದಕ್ಕಾಗಿಯೇ ಮಾನವ ಹಕ್ಕುಗಳು ಜಾರಿಯಲ್ಲಿವೆ. ದಿನ ನಿತ್ಯದ ಕೆಲಸಗಳಲ್ಲಿ ಮಾನವ ಹಕ್ಕುಗಳ ಉಲ್ಲಂಘನೆ ಕಾಣಬಹುದು. ಆದರೆ, ಸಾಮಾನ್ಯವಾಗಿ ಇದರ ಬಗ್ಗೆ ಯಾರಿಗೂ ತಿಳಿದಿರುವುದಿಲ್ಲ. ಮೊದಲು ಮಾನವ ಹಕ್ಕುಗಳ ಬಗ್ಗೆ ಎಲ್ಲರೂ ಅರ್ಥ ಮಾಡಿಕೊಳ್ಳುವುದು ಅತ್ಯವಶ್ಯಕವಾಗಿದೆ ಎಂದು ಹೇಳಿದರು.

ಸಾರ್ವಜನಿಕ ಸ್ಥಳಗಳಾದ ದೇವಸ್ಥಾನಗಳಲ್ಲಿ ಕೆಲವರಿಗೆ ಪ್ರವೇಶಕ್ಕೆ ನಿರ್ಬಂಧ ವಿಧಿಸುವುದು ಹಾಗೂ ಜಾತಿ ವ್ಯವಸ್ಥೆಯಲ್ಲಿ ಮೇಲು ಕೀಳು ಎಂದು ಭಾವಿಸುವ



ವ್ಯವಸ್ಥೆಯೂ ಸಹ ಮಾನವ ಹಕ್ಕುಗಳ ಉಲ್ಲಂಘನೆಯಾಗಿದೆ. ಮಾನವ ಹಕ್ಕುಗಳ ಉಲ್ಲಂಘನೆಯಾದರೆ, ಅವುಗಳಿಗೆ ಶಿಕ್ಷೆ ನೀಡುವ ಅವಕಾಶ ಕಾನೂನಿನಲ್ಲಿದೆ. ಮಾನವ ಹಕ್ಕುಗಳು ಪ್ರತಿಯೊಬ್ಬರಿಗೂ ಸಮಾನವಾಗಿದ್ದು, ಅವುಗಳ ಉಲ್ಲಂಘನೆಯಾಗದಂತೆ ನೋಡಿಕೊಳ್ಳುವುದು ಈ ದೇಶದ ಪ್ರಜೆಗಳ ಜವಾಬ್ದಾರಿಯಾಗಿದೆ ಎಂದರು.

ಕೊಪ್ಪಳ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ರಾಹುಲ್ ರತ್ನಂ ಪಾಂಡೇಯ ಅವರು ಮಾತನಾಡಿ, ಪ್ರತಿಯೊಬ್ಬರೂ ನೆಮ್ಮದಿಯ ಬದುಕು ಸಾಗಿಸಲು ನಮ್ಮ ಸಂವಿಧಾನದಲ್ಲಿ ಮೂಲಭೂತ ಹಕ್ಕುಗಳನ್ನು ನೀಡಿದೆ. ಮಾನವ ಹಕ್ಕುಗಳ ರಕ್ಷಣೆಗೂ ಸಹ ಕಾಯ್ದೆ ರೂಪಿಸಲಾಗಿದ್ದು, ಎಲ್ಲಾ ವಿದ್ಯಾರ್ಥಿಗಳು ಇದರ ಅರಿವನ್ನು ಹೊಂದುವುದರ ಜೊತೆಗೆ, ಇತರರಿಗೂ ಜಾಗೃತಿ ಮೂಡಿಸಬೇಕು. ಮಕ್ಕಳಿಗೆ ಶಾಲೆ ಬಿಡಿಸುವುದು ಸಹ ಅವರ ಹಕ್ಕುಗಳ ಉಲ್ಲಂಘನೆಯಾಗಿದ್ದು, ಮಕ್ಕಳಿಗೆ ಶಿಕ್ಷಣ ನೀಡುವುದು ಪ್ರತಿಯೊಬ್ಬ ಪೋಷಕರ ಕರ್ತವ್ಯವಾಗಿದೆ ಎಂದು ಹೇಳಿದರು.

ಮಂಗಳೂರು ಗ್ರಾಮದ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಶುಂಪಾಲರಾದ ಡಾ ಪ್ರಭುರಾಜ ನಾಯಕ ಅವರು ವಿಶೇಷ ಉಪನ್ಯಾಸ ನೀಡಿ ಮಾತನಾಡಿ, ಮಾನವ ಹಕ್ಕುಗಳ ದಿನಾಚರಣೆಯ ಈ ವರ್ಷದ ಘೋಷ ವಾಕ್ಯ "ನಮ್ಮ ಹಕ್ಕು ನಮ್ಮ ಭವಿಷ್ಯ" ಎಂಬುವುದಾಗಿದೆ. ರಾಷ್ಟ್ರಗಳು ಹುಟ್ಟುವ ಮೊದಲು, ಸಮಾಜ ಹುಟ್ಟುವ ಮೊದಲು ನಾವು ಇತರೆ ಪ್ರಾಣಿಗಳಂತೆ ಬುದುಕುತ್ತಿದ್ದೆವು. ಮಾನವನ ಭವಿಷ್ಯವನ್ನು ಕಟ್ಟಿಕೊಳ್ಳಲು ಮಾನವ ಹಕ್ಕುಗಳನ್ನು ಆಂಭಿಸಲಾಗಿದೆ. ಸಮಾಜದಲ್ಲಿ ಮನುಷ್ಯ ಘನತೆಯಿಂದ ಬದುಕು ಸಾಗಿಸಲು ಬೇಕಿರುವ ಮೂಲಭೂತ ಅವಶ್ಯಕತೆಗಳನ್ನು ಪಡೆಯುವುದು ಆತನ ಹಕ್ಕು ಆಗಿದೆ. ಯಾವುದೇ ಕಾರಣದಿಂದ ಇದಕ್ಕೆ ತೊಡಕಾದಲ್ಲಿ, ಅದು ಮಾನವ ಹಕ್ಕುಗಳ ಉಲ್ಲಂಘನೆಯಾದಂತೆ ಆಗುತ್ತದೆ. ಭಾರತದ ಸಂವಿಧಾನದಲ್ಲಿ ಸಂವಿಧಾನ ರಚನಾಕಾರರು ಮಾನವ ಹಕ್ಕುಗಳು ಎಲ್ಲೂ ಉಲ್ಲಂಘನೆಯಾಗದಂತೆ ನಮ್ಮ ಸಂವಿಧಾನದಲ್ಲಿ ಅಳವಡಿಸಿದ್ದಾರೆ. ಈ ಹಕ್ಕುಗಳ ರಕ್ಷಣೆಗೆ ಸೂಕ್ತ ಕಾನೂನು ರೂಪಿಸಲಾಗಿದೆ. ಮನುಷ್ಯ ತನ್ನ ಘನತೆ ಹೆಚ್ಚಿಸಿಕೊಳ್ಳಬೇಕಾದರೆ ಇನ್ನೊಬ್ಬರ ಹಕ್ಕನ್ನು ಕಾಪಾಡಬೇಕು ಅಂದಾಗ ಮಾತ್ರ ಮಾನವ ಹಕ್ಕುಗಳ ದಿನಾಚರಣೆಗೆ ಮಹತ್ವ ದೊರೆಯುತ್ತದೆ ಎಂದರು.

**ಮೌನಾಚರಣೆ:** ರಾಜ್ಯದ ಮಾಜಿ ಮುಖ್ಯಮಂತ್ರಿಗಳು ಹಾಗೂ ಮಾಜಿ ಕೇಂದ್ರ ಸಚಿವರಾರ ಎಸ್.ಎಂ.ಕೃಷ್ಣ ಅವರ ನಿಧನ ಹಿನ್ನೆಲೆಯಲ್ಲಿ ಕಾರ್ಯಕ್ರಮಕ್ಕೂ ಪೂರ್ವ ಎರಡು ನಿಮಷಗಳ ಮೌನ ಆಚರಿಸಿ, ಅಗಲಿದ ಗಣ್ಯರಿಗೆ ಗೌರವ ನಮನ ಸಮರ್ಪಿಸಲಾಯಿತು.

**ಪ್ರತಿಜ್ಞಾವಿಧಿ ಸ್ವೀಕಾರ:** ಮಾನವ ಹಕ್ಕುಗಳ ದಿನದ ಪ್ರತಿಜ್ಞಾ ವಿಧಿಯನ್ನು ಜಿಲ್ಲಾ ತರಬೇತಿ ಸಂಸ್ಥೆಯ ಪ್ರಾಚಾರ್ಯರಾದ ಕೃಷ್ಣಮೂರ್ತಿ ದೇಸಾಯಿ ಅವರು ಬೋಧಿಸಿದರು. ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಎಲ್ಲರೂ ಇದೇ ಸಂದರ್ಭದಲ್ಲಿ ಪ್ರತಿಜ್ಞೆ ಸ್ವೀಕರಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ ರಾಮ್ ಎಲ್ ಅರಸಿದ್ದಿ, ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷರಾದ ಎ.ವಿ.ಕಣವಿ, ಕೊಪ್ಪಳ ತಹಶೀಲ್ದಾರ ವಿಠಲ್ ಚೌಗಲೆ, ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಜಗದೀಶ, ಕೊಪ್ಪಳ ಯುನಿಸೆಫ್ ವಿಭಾಗದ ಹರೀಶ್ ಜ್ಯೋಗಿ ಸೇರಿದಂತೆ ಇತರೆ ಅಧಿಕಾರಿಗಳು ಹಾಗೂ ಕೊಪ್ಪಳ ನಗರದ ವಿವಿಧ ಶಾಲಾ ಕಾಲೇಜುಗಳ ಮಕ್ಕಳು ಉಪಸ್ಥಿತರಿದ್ದರು.

# ಹನುಮಮಾಲ ಕಾರ್ಯಕ್ರಮ ತೈಯಾರಿ ಜೋರು

■ **ಹಂಪಿ ಟೈಮ್ಸ್ ಕೊಪ್ಪಳ**

ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಅಂಜನಾದ್ರಿಯಲ್ಲಿ ಡಿಸೆಂಬರ್ 12 ಮತ್ತು 13 ರಂದು ನಡೆಯಲಿರುವ ಹನುಮಮಾಲ ಕಾರ್ಯಕ್ರಮದ ಸಿದ್ಧತೆಗಳು ಭರದಿಂದ ಸಾಗಿವೆ. ಈ ಕಾರ್ಯಕ್ರಮಕ್ಕೆ ಬರುವ ಲಕ್ಷ್ಯಾಂತರ ಭಕ್ತಾಧಿಗಳಿಗೆ ತೊಂದರೆಯಾಗದಂತೆ ಕೊಪ್ಪಳ ಜಿಲ್ಲಾಡಳಿತದ ವತಿಯಿಂದ ಎಲ್ಲಾ ಸಿದ್ಧತೆಗಳು ನಡೆಯುತ್ತಿವೆ.

ರಸ್ತೆ ಮತ್ತು ಪಾರ್ಕಿಂಗ ಸ್ಥಳಗಳ ಸ್ವಚ್ಛತೆ, ಪಾದಚಾರಿ ಮಾರ್ಗದ ನಿರ್ಮಾಣ, ಭಕ್ತರಿಗೆ ಕುಡಿಯುವ ನೀರು ಮತ್ತು ಸ್ನಾನಕ್ಕಾಗಿ ನೂರಾರು ನೀರಿನ ಟ್ಯಾಫಗಳನ್ನು ಅಳವಡಿಸಲಾಗುತ್ತಿದೆ. ಕಾರ್ಯಕ್ರಮಕ್ಕೆ ಬರುವ ಭಕ್ತರಿಗೆ ಪ್ರಸಾದ ವಿತರಣೆ ವ್ಯವಸ್ಥೆ ಮಾಡಲಾಗಿದೆ. ವೇದಪಾಠ ಶಾಲೆಯ ಹತ್ತಿರದ ಕೋಣೆಯಲ್ಲಿ ಸಾವಿರಾರು ಲಾಡುಗಳ ಪ್ರಸಾದಕ್ಕೆ ಸಿದ್ಧಗೊಳುತ್ತಿವೆ. ಸೂಕ್ತ ಪೊಲೀಸ್ ಬಂದೋಬಸ್ತ್ ಜೊತೆಗೆ ಭಕ್ತಾಧಿಗಳ ಅನುಕೂಲಕ್ಕಾಗಿ ಸಹಾಯವಾಣಿ ಕೇಂದ್ರಗಳ ಸ್ಥಾಪನೆ ಸೇರಿದಂತೆ ಇತರೆ ಹಲವಾರು ಕಾರ್ಯಗಳು ಭರದಿಂದ ಸಾಗಿವೆ.

**ಸಾರಿಗೆ ವ್ಯವಸ್ಥೆ:** ಆನೆಗೊಂದಿಯಿಂದ ಅಂಜನಾದ್ರಿಯವರೆಗೆ ಎರಡು ಮಿನಿ ಬಸ್ಸುಗಳನ್ನು ಶುಲ್ಕ ರಹಿತವಾಗಿ ಸಂಚರಿಸುವ ವ್ಯವಸ್ಥೆ ಮಾಡಲಾಗಿದೆ. ಇತರ ಜೊತೆಗೆ ಗಂಗಾವತಿ, ಹೊಸಪೇಟೆ, ಕೊಪ್ಪಳದಿಂದ ಅಂಜನಾದ್ರಿ ಬೆಟ್ಟಕ್ಕೆ ಆಗಮಿಸುವ ಭಕ್ತಾಧಿಗಳಿಗಾಗಿ ವಿಶೇಷ ಬಸ್ಸಿನ ವ್ಯವಸ್ಥೆ ಇರಲಿದೆ.

**15 ಸ್ಥಳದಲ್ಲಿ ಪಾರ್ಕಿಂಗ ವ್ಯವಸ್ಥೆ:** ಗಂಗಾವತಿ, ಹೊಸಪೇಟೆ, ಹುಲಗಿಯ ಮಾರ್ಗವಾಗಿ ಬರುವ ಭಕ್ತಾಧಿಗಳ ಹಾಗೂ ಸಾರ್ವಜನಿಕರ ವಾಹನಗಳಿಗಾಗಿ ಆನೆಗುಂದಿ ಉತ್ಸವ ಸ್ಥಳ, ಹನುಮನಹಳ್ಳಿಯ ಹತ್ತಿರ, ದೇವಸ್ಥಾನ ಹಿಂಭಾಗದಲ್ಲಿ, ಪಂಪಾಸರೋವರ ಹತ್ತಿರ ಹಾಗೂ ಇತರೆ ಕಡೆಗಳಲ್ಲಿ ಒಳಗೊಂಡಂತೆ




ಒಟ್ಟು 15 ಸ್ಥಳಗಳಲ್ಲಿ ಪಾರ್ಕಿಂಗ ವ್ಯವಸ್ಥೆ ಮಾಡಲಾಗಿದೆ. ಅಲ್ಲದೇ ಸರಕಾರಿ ವಾಹನ ನಿಲುಗಡೆಗೆ ಅಂಜನಾದ್ರಿ ದೇವಸ್ಥಾನದ ಮುಂಭಾಗದಲ್ಲಿ ಸ್ಥಳ ನಿಗಧಿಪಡಿಸಿದೆ.

**ಭಕ್ತಾದಿಗಳ ಆರೋಗ್ಯ ಸೇವೆ:** ಹನುಮಮಾಲಾ ಕಾರ್ಯಕ್ರಮಕ್ಕೆ ಬರುವ ಭಕ್ತಾಧಿಗಳ ಆರೋಗ್ಯದ ಹಿತದೃಷ್ಟಿಯಿಂದ ವೈದ್ಯರು ಮತ್ತು ಅಗತ್ಯ ಔಷಧಿಗಳೊಂದಿಗೆ 2 ಅಂಬುಲೆನ್ಸ್ ತುರ್ತು ಸೇವೆಗಾಗಿ ಕಾಯ್ದಿರಿ ಸಲಾಗಿದೆ. ಇದರ ಜೊತೆಗೆ ದೇವಸ್ಥಾನದ ಪಾರ್ಕಿಂಗನಲ್ಲಿ ಒಂದು ಚಿಕಿತ್ಸಾಲಯ, ವೇದಪಾಠ ಶಾಲೆಯ ಹತ್ತಿರ ಮತ್ತೊಂದು ಚಿಕಿತ್ಸಾಲಯ ಹಾಗೂ ಬೆಟ್ಟದ ಮೇಲೆ ದೇವಸ್ಥಾನದ ಹತ್ತಿರ ಔಷಧಿಗಳೊಂದಿಗೆ ವೈದ್ಯರ ತಂಡ. ಬೆಟ್ಟ ಹತ್ತುವ ಮತ್ತು ಇಳಿಯುವ ಮಧ್ಯದಲ್ಲಿ 2 ವೈದ್ಯಕೀಯ ತಂಡ (ರೆಸ್ಕ್ಯೋ ಟೀಮ್ ಮತ್ತು ಔಷಧಿಗಳೊಂದಿಗೆ)ಗಳ ವ್ಯವಸ್ಥೆ ಮಾಡಲಾಗಿದೆ.

**ಸಹಾಯವಾಣಿ ಕೇಂದ್ರ ಆರಂಭ:** ಭಕ್ತಾಧಿಗಳ ಅನುಕೂಲಕ್ಕಾಗಿ ಸಹಾಯವಾಣಿ ಕೇಂದ್ರಗಳನ್ನು ಆರಂಭಿಸಲಾಗಿದ್ದು, ಗಂಗಾವತಿಯ ರೈಲು ನಿಲ್ದಾಣ ಹಾಗೂ ಬಸ್ ನಿಲ್ದಾಣದಲ್ಲಿ ಬ್ಯಾನರ್‌ನೊಂದಿಗೆ ಇಬ್ಬರು ಅಧಿಕಾರಿಗಳು ಮತ್ತು ಇಬ್ಬರು ಪೊಲೀಸ್‌ರು ಒಳಗೊಂಡ ಸಹಾಯವಾಣಿ ಕೇಂದ್ರವನ್ನು ಆರಂಭಿಸಲಾಗಿದೆ. ಅದೇ ರೀತಿ ಆನೆಗುಂದಿಯ ಶ್ರೀ ಕೃಷ್ಣದೇವರಾಯವೃತದಲ್ಲಿಬ್ಯಾನರ್‌ನೊಂದಿಗೆ ಇಬ್ಬರು ಅಧಿಕಾರಿಗಳು ಮತ್ತು ಇಬ್ಬರು ಪೊಲೀಸ್‌ರು ಒಳಗೊಂಡ ಸಹಾಯವಾಣಿ ಕೇಂದ್ರ ಹಾಗೂ ಅಂಜನಾದ್ರಿ ದೇವಸ್ಥಾನದ ಮುಂಭಾಗದಲ್ಲಿ ಬ್ಯಾನರ್‌ನೊಂದಿಗೆ ಇಬ್ಬರು ಅಧಿಕಾರಿಗಳು ಮತ್ತು ಇಬ್ಬರು ಪೊಲೀಸ್‌ರನ್ನು ಒಳಗೊಂಡ ಸಹಾಯವಾಣಿ ಕೇಂದ್ರಗಳನ್ನು ಆರಂಭಿಸಲಾಗಿದೆ. ಈ ಸಹಾಯವಾಣಿ ಕೇಂದ್ರಗಳಲ್ಲಿ ಮಾಲಾಧಾರಿಗಳಿಗೆ ಮಾಹಿತಿ ಮತ್ತು ಮಾರ್ಗದರ್ಶನ ನೀಡಲಾಗುವುದು ಎಂದು ಕೊಪ್ಪಳ ಉಪವಿಭಾಗಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.





## ರಕ್ತದಾನ ಮಾಡಿ ಜೀವ ಉಳಿಸಿ

**ಮೊದಲ ಪುಟದಿಂದ**

ಕಾನಮಡುಗಿನ ದಾಸೋಹ ಮಠದ ಶ್ರೀ ಐಮಡಿ ಶರಣಾರ್ಯರು ಮಾತನಾಡಿ, ರಕ್ತದಾನ ಮಹಾದಾನವಾಗಿದೆ. ಅಪಘಾತ ಹಾಗೂ ಇತರ ತುರ್ತು ಚಿಕಿತ್ಸೆ ಸಂದರ್ಭದಲ್ಲಿ ರೋಗಿಗೆ ರಕ್ತದ ಅವಶ್ಯಕತೆ ಬಹಳ ಇರುತ್ತದೆ. ಆ ಸಮಯ ರೋಗಿ ಪಾಲಿಗೆ ಪ್ರತಿ ನಿಮಿಷವೂ ಅಮೂಲ್ಯ. ರಕ್ತ ಕೊರತೆ ತಪ್ಪಿಸಿ, ಪ್ರಾಣ ಉಳಿಸಲು ರಕ್ತ ಅತ್ಯವಶ್ಯವಕವಾಗಿರುತ್ತದೆ. ವೈಜ್ಞಾನಿಕವಾಗಿ ಜಗತ್ತು ಎಷ್ಟೇ ಮುಂದುವರಿದಿದ್ದರೂ ಮಾನವ ದೇಹದ ಹೊರತಾಗಿ ರಕ್ತ ಉತ್ಪಾದಿಸಲು ಸಾಧ್ಯವಿಲ್ಲ ಎಂದರು. ಈ ಸಂದರ್ಭದಲ್ಲಿ ವೈದ್ಯಾಧಿಕಾರಿ, ಡಾ. ಚಿರಂಜೀವಿ, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಶ್ರೀನಿವಾಸ್, ನಿರೀಕ್ಷಣಾಧಿಕಾರಿ, ನವೀನ್ ಕುಮಾರ್, ಸಿಎಚ್ಒ ಮೀನಾಕ್ಷಿ, ಆಶಾ ಕಾರ್ಯಕರ್ತರು ಸೇರಿದಂತೆ ಸಿಬ್ಬಂದಿಗಳು ಜನಪ್ರತಿನಿಧಿಗಳು, ಮುಖಂಡರು ಇದ್ದರು.

## ಡಿ 12 ರಂದು ಕಮಲಾಪುರ ವಿವಿದೆಡೆ ವಿದ್ಯುತ್ ವ್ಯತ್ಯಯ

■ ಹಂಪಿ ಟೈಮ್ಸ್ ಹೊಸಪೇಟೆ

ಕಮಲಾಪುರದ 110/11ಕೆವಿ ವಿದ್ಯುತ್ ಕೇಂದ್ರದಲ್ಲಿ ತುರ್ತುನಿರ್ವಹಣಾ ಕಾಮಗಾರಿ ಇರುವುದರಿಂದ ಡಿಸೆಂಬರ್ 12 ರಂದು ಬೆಳಗ್ಗೆ 9.30 ಯಿಂದ ಸಂಜೆ 5 ಗಂಟೆಯವರೆಗೆ ಕಮಲಾಪುರದ ಶಾಖಾ ವ್ಯಾಪ್ತಿಗೆ ಬರುವ ಕಮಲಾಪುರ ಪಟ್ಟಣ ಪಂಚಾಯಿತಿ, ಬುಕ್ಕಸಾಗರ , ಸೀತರಾಮ ತಾಂಡ, ಮಲಪನಗುಡಿ, ಹಂಪಿ, ಪಾಪಿನಾಯಕನಹಳ್ಳಿ, ಗಾದಿಗನೂರು ಮತ್ತು ಬೈಲುವದ್ದೀಗೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ವ್ಯತ್ಯವಾಗಲಿದೆ. ಎಂದು ಜೆಸ್ಕಾಂ ತಿಳಿಸಿದೆ.

### ಬಳ್ಳಾರಿಯಲ್ಲಿ ಮಾನವ ಹಕ್ಕುಗಳ ದಿನಾಚರಣೆ ಅಂಗವಾಗಿ ಜಾಗೃತಿ ಜಾಥಾದಲ್ಲಿ : ನ್ಯಾಯಾಧೀಶೆ ಕೆ.ಜಿ.ಶಾಂತಿ ಹೇಳಿಕೆ

# ಮಾನವ ಹಕ್ಕುಗಳ ರಕ್ಷಣೆ ಪ್ರತಿಯೊಬ್ಬರ ಕರ್ತವ್ಯ

■ **ಹಂಪಿ ಟೈಮ್ಸ್ ಬಳ್ಳಾರಿ**

ಸಮಾಜದಲ್ಲಿ ಕಾನೂನಾತ್ಮಕವಾಗಿ ಜೀವಿಸಲು ಸಂವಿಧಾನಾತ್ಮಕವಾಗಿರುವ ಮಾನವ ಹಕ್ಕುಗಳ ರಕ್ಷಣೆ ಮಾಡುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರೂ ಆದ ಕೆ.ಜಿ ಶಾಂತಿ ಅವರು ಹೇಳಿದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ರೀಡ್ಸ್ ಸಂಸ್ಥೆ, ಶಾಲಾ (ಪದವಿ ಪೂರ್ವ) ಶಿಕ್ಷಣ ಇಲಾಖೆ, ಜಿಲ್ಲಾ ವಕೀಲರ ಸಂಘ ಹಾಗೂ ಕರ್ನಾಟಕ ಹಾಲು ಉತ್ಪಾದಕರ ಒಕ್ಕೂಟ, ಬಳ್ಳಾರಿ ಇವರ ಸಂಯುಕ್ತಾಶ್ರಯದಲ್ಲಿ 'ವಿಶ್ವ ಮಾನವ ಹಕ್ಕುಗಳ ದಿನಾಚರಣೆ' ಅಂಗವಾಗಿ ನಗರದ ತಾಳೂರು ರಸ್ತೆಯ ಹೊಸ ಜಿಲ್ಲಾ ನ್ಯಾಯಾಲಯದ ಆವರಣದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಜಾಗೃತಿ ಜಾಥಾಗೆ ಚಾಲನೆ ನೀಡಿ ಅವರು ಮಾತನಾಡಿದರು. ಸಮಾಜದಲ್ಲಿ ಜೀವಿಸುವ ಪ್ರತಿಯೊಬ್ಬರಿಗೂ ಜೀವಿಸುವ ಹಕ್ಕು, ಆರೋಗ್ಯ, ವಸತಿ, ಉದ್ಯೋಗ ಹೊಂದುವ ಹಕ್ಕು, ಶಿಕ್ಷಣ ಹಕ್ಕು ಸೇರಿದಂತೆ ಹಲವಾರು ಹಕ್ಕುಗಳು ಹೊಂದುವ ಅವಕಾಶವಿದೆ. ಮಾನವ ಹಕ್ಕುಗಳಿಗೆ ಚ್ಯುತಿಯಾಗದಂತೆ ರಕ್ಷಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದರು.

ಪ್ರತಿಯೊಬ್ಬ ವ್ಯಕ್ತಿಗೂ ಘನತೆ, ಗೌರವದಿಂದ ಬದುಕುವ ಹಕ್ಕು ಇದ್ದೂ, ಮಾನವ ಹಕ್ಕು ಕಸಿದುಕೊಳ್ಳಲು ಯಾರಿಂದಲೂ ಸಾಧ್ಯವಿಲ್ಲ. ಸಮಾಜದ ಕಟ್ಟಕಡೆಯ ಪ್ರಜೆಯೂ ಸಹ ಸಹಬಾಳ್ವೆ ಜೀವನ ನಡೆಸಲು ಮಾನವ ಹಕ್ಕುಗಳು ಸಹಕಾರಿಯಾಗುತ್ತವೆ ಎಂದು ತಿಳಿಸಿದರು.



**ಮಹಿಳಾ ಸಾರಥಿ–ಸ್ವಾವಲಂಬಿ ಜೀವನ**

ಮಾನವ ಹಕ್ಕುಗಳಲ್ಲಿ ದುಡಿಮೆಯ ಹಕ್ಕು ಕೂಡ ಒಂದಾಗಿದ್ದು, ಅದರಲ್ಲೂ ಮಹಿಳೆಯರ ಸ್ವಾವಲಂಬಿ ಜೀವನ ಸಮಾನತೆ ಸಾರುತ್ತದೆ. ರೀಡ್ಸ್ ಸಂಸ್ಥೆಯಿಂದ ಮಹಿಳೆಯರಿಗೆ ಉಚಿತ ವಾಹನ ತರಬೇತಿ ನೀಡಿ ಸ್ವಾಭಿಮಾನದಿಂದ ಜೀವನ ನಡೆಸಲು ಅನುವು ಮಾಡಿಕೊಟ್ಟಿರುವುದು ಶ್ಲಾಘನೀಯ ಎಂದರು.

ಇದೇ ವೇಳೆ ಕುರುಗೋಡು ತಾಲ್ಲೂಕಿನ ಬಾದನಹಟ್ಟಿ ಗ್ರಾಮದ ಮಹಿಳೆ ನಾರಾಯಣಮ್ಮ ಅವರಿಗೆ ರೀಡ್ಸ್ ಸಂಸ್ಥೆಯಿಂದ ನೀಡಲಾದ ಆಟೋ ರಿಕ್ಷಾದ ಕೀ ಹಸ್ತಾಂತರಿಸಿ, ಮೊದಲ ಆಟೋ ರಿಕ್ಷಾ ಚಾಲಕಿಗೆ ಉತ್ತಮ ಜೀವನ ನಡೆಸಲು ಶುಭ ಹಾರೈಸಿದರು.

**ಜಾಗೃತಿ ಜಾಥಾ**

ವಿಶ್ವ ಮಾನವ ಹಕ್ಕುಗಳ ದಿನಾಚರಣೆ' ಅಂಗವಾಗಿ ಮಂಗಳವಾರ ಹಮ್ಮಿಕೊಂಡಿದ್ದ ಜಾಗೃತಿ ಜಾಥಾವು ಜಿಲ್ಲಾ ನ್ಯಾಯಾಲಯದ ಆವರಣದಿಂದ ಆರಂಭಗೊಂಡು ಕನಕ ದುರ್ಗಮ್ಮ ದೇವಸ್ಥಾನ ಮಾರ್ಗವಾಗಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿ ಆವರಣಕ್ಕೆ ತಲುಪಿ ಸಂಪನ್ನಗೊಂಡಿತು.

ಜಿಲ್ಲಾ ನ್ಯಾಯಾಲಯದ ಕೌಟುಂಬಿಕ ನ್ಯಾಯಾಧೀಶರಾದ ಸಿದ್ಧಲಿಂಗ ಪ್ರಭು, ಒಂದನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ವಿದ್ಯಾಧರ ಶಿರಹಟ್ಟಿ, ಎಫ್‌ಟಿಎಸ್‌ಸಿ–1 ವಿಶೇಷ ನ್ಯಾಯಾಲಯದ ನ್ಯಾಯಾಧೀಶರಾದ ರಾಘವೇಂದ್ರ ಗೌಡ, ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಬಿ.ಜಿ ಪ್ರಮೋದ್, ನಾಲ್ಕನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ವಾಸುದೇವ ಗುಡಿ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ರಾಜೇಶ್.ಎನ್ ಹೊಸ ಮನೆ ಸೇರಿದಂತೆ ನ್ಯಾಯಾಲಯದ ನ್ಯಾಯಾಧೀಶರೂ ಹಾಗೂ ರೀಡ್ಸ್ ಸಂಸ್ಥೆಯ ಕಾರ್ಯನಿರ್ವಾಹಕ ನಿರ್ದೇಶಕ ಸಿ. ತಿಪ್ಪೇಶಪ್ಪ, ನ್ಯಾಯಾಲಯದ ಸಿಬ್ಬಂದಿ, ರೀಡ್ಸ್ ಸಂಸ್ಥೆಯ ಸಿಬ್ಬಂದಿ, ಶಾಲಾ–ಕಾಲೇಜು ವಿದ್ಯಾರ್ಥಿಗಳು ಮತ್ತು ಇತರರು ಉಪಸ್ಥಿತರಿದ್ದರು.

## ಮೀನುಗಾರಿಕೆ ಸಲಕರಣೆಗಳ ಕಿಟ್ ವಿತರಿಸಿದ ಶಾಸಕ ಜೆ.ಎನ್.ಗಣೇಶ್



■ **ಹಂಪಿ ಟೈಮ್ಸ್ ಕಂಪ್ಲಿ**

ಮೀನುಗಾರಿಕೆ ಇಲಾಖೆ ವತಿಯಿಂದ ಉಚಿತವಾಗಿ ನೀಡುವ ಮೀನುಗಾರಿಕೆ ಸಲಕರಣೆಗಳ ಕಿಟ್‌ನ್ನು ಕೈಮಗ್ಗ ಅಭಿವೃದ್ಧಿ ನಿಗಮದ ಅಧ್ಯಕ್ಷ ಹಾಗೂ ಕಂಪ್ಲಿ ಶಾಸಕ ಜೆ.ಎನ್.ಗಣೇಶ್ ಅವರು ಕಂಪ್ಲಿ ಪಟ್ಟಣದ ಜಿಲ್ಲಾ ಕೃಷಿ ತರಬೇತಿ ಕೇಂದ್ರದಲ್ಲಿ ಸೋಮವಾರ ಮೀನುಗಾರರಿಗೆ ವಿತರಿಸಿದರು.

ಕಿಟ್‌ನಲ್ಲಿ ಬಲೆ, ಲೈಫ್ ಜಾಕೆಟ್ ಮತ್ತು ಫೈಬರ್ ಗ್ಲಾಸ್ ಹರಿಗೋಲು ಒಳಗೊಂಡಿದ್ದು, ಕಂಪ್ಲಿ ಪಟ್ಟಣದ ನೋಂದಾಯಿತ ಮೀನುಗಾರರಿಗೆ ವಿತರಿಸಲಾಯಿತು. ಈ ವೇಳೆ ಮಾತನಾಡಿದ ಅವರು, ಮೀನುಗಾರಿಕೆ ಇಲಾಖೆ ವತಿಯಿಂದ ನೀಡುವ ಸೌಲಭ್ಯ ಪಡೆದುಕೊಳ್ಳಬೇಕು ಎಂದರು. ಬಳಿಕ ಎನ್‌ಎಫ್‌ಡಿಪಿ ಯೋಜನೆಯಡಿ ನೋಂದಣಿಗೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಮೀನುಗಾರಿಕೆ ಉಪನಿರ್ದೇಶಕ ಶಿವಣ್ಣ, ಕಂಪ್ಲಿ ತಾಲ್ಲೂಕು ಪಂಚಾಯತ್ ಇಒ ಶ್ರೀಕುಮಾರ್, ಜಿಲ್ಲಾ ಕೃಷಿ ತರಬೇತಿ ಕೇಂದ್ರದ ಸಹಾಯಕ ನಿರ್ದೇಶಕರಾದ ಅಭಿಲಾಷ, ಬಳ್ಳಾರಿ ತಾಲ್ಲೂಕು ಮೀನುಗಾರಿಕೆ ಸಹಾಯಕ ನಿರ್ದೇಶಕರಾದ ಬಿ.ಭಾವನ, ಸಂಡೂರು ತಾಲ್ಲೂಕು ಮೀನುಗಾರಿಕೆ ಸಹಾಯಕ ನಿರ್ದೇಶಕ ಮಂಜುನಾಥ.ಕೆ.ಎಸ್ ಸೇರಿದಂತೆ ಕಂಪ್ಲಿ ಮತ್ತು ಕುರುಗೋಡು ತಾಲ್ಲೂಕಿನ ಮೀನುಗಾರರ ಸಹಕಾರ ಸಂಘದ ಅಧ್ಯಕ್ಷರು, ಮೀನುಗಾರರು ಮತ್ತು ಮೀನುಗಾರಿಕೆ ಇಲಾಖೆಯ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.




ಕಂಪ್ಲಿ ಪಟ್ಟಣದ ಆರಾಧ್ಯದೈವ ಶ್ರೀಪೇಟೆ ಬಸವೇಶ್ವರ ನೀಲಮ್ಮನವರ ಜೋಡಿ ರಥೋತ್ಸವ ಮಂಗಳವಾರ ಶ್ರದ್ಧೆಭಕ್ತಿಗಳಿಂದ ಜರುಗಿತು.

**ಹಂಪಿ ಟೈಮ್ಸ್**
ವಿಜಯನಗರದ ಹೆಮ್ಮೆ
ಕನ್ನಡ ದಿನ ಪತ್ರಿಕೆ

HAMPI TIMES VIJAYANAGARA

## SSLC ಈ ಬಾರಿ ಫಲಿತಾಂಶ ನಮ್ಮದೆ

### 10ನೇ ತರಗತಿ ವಿದ್ಯಾರ್ಥಿಗಳಿಗೆ ವಿಜ್ಞಾನ ಚಿತ್ರ ಸ್ಪರ್ಧೆ
### ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಲು ಒಂದು ಉತ್ತಮ ಅವಕಾಶ!

ವಿಜ್ಞಾನ ಕಲಿಕೆಯು ಕೇವಲ ಪಠ್ಯಪುಸ್ತಕ ಓದುವುದು ಮತ್ತು ಪರೀಕ್ಷೆ ಬರೆಯುವುದಕ್ಕೆ ಸೀಮಿತವಲ್ಲ.
ಅದು ಸೃಜನಾತ್ಮಕತೆಯನ್ನು ಬೆಳೆಸುವ ಮತ್ತು ತತ್ವಗಳನ್ನು ತಾತ್ವಿಕವಾಗಿ ಅರ್ಥಮಾಡಿಕೊಳ್ಳುವ ಒಂದು ಪ್ರಕ್ರಿಯೆ.
10ನೇ ತರಗತಿ ವಿದ್ಯಾರ್ಥಿಗಳಿಗೆ, ಪರೀಕ್ಷೆಯ ಸಿದ್ಧತೆಯನ್ನು ಬೆಂಬಲಿಸಲು ಮತ್ತು ಕೌಶಲ್ಯಗಳನ್ನು ಅಭಿವೃದ್ಧಿಪಡಿಸಲು **ಹಂಪಿ ಟೈಮ್ಸ್ ಬಳಗ**ದಿಂದ "**ವಿಜ್ಞಾನ ಚಿತ್ರ ಸ್ಪರ್ಧೆ**" ಆಯೋಜಿಸಲಾಗಿದೆ.

**-: ಈ ವಾರದ (13-12-2024) ಚಿತ್ರ ಸ್ಪರ್ಧೆ - 3 : -**
**ನೀರಿನ ವಿದ್ಯುತ್ ವಿಭಜನೆಯಲ್ಲಿ ಉಪಯೋಗಿಸುವ ಉಪಕರಣದ ಅಂದವಾದ ಚಿತ್ರವನ್ನು ಬಿಡಿಸಿ ಭಾಗಗಳನ್ನು ಗುರುತಿಸಿ ?**

### -: ಸೂಚನೆಗಳು :-

1. ವಿದ್ಯಾರ್ಥಿಯು 2023-24 ಶೈಕ್ಷಣಿಕ ಸಾಲಿನಲ್ಲಿ 10ನೇ ತರಗತಿ ವಿದ್ಯಾಭ್ಯಾಸ ಮಾಡುತ್ತಿರಬೇಕು.
2. ಶಿಕ್ಷಕರ/ಶಿಕ್ಷಕಿಯರ ಸಮ್ಮುಖದಲ್ಲಿ ನಿಗದಿತ ಸಮಯ (10 ನಿಮಿಷ) ದಲ್ಲಿ ಶುಕ್ರವಾರದಂದು ಶಾಲೆಯಲ್ಲಿ ಚಿತ್ರವನ್ನು A4 ಹಾಳೆಯ ಅರ್ಧ ಭಾಗದಲ್ಲಿ ಪೆನ್ಸಿಲ್ ನಿಂದ ಬಿಡಿಸಬೇಕು
3. ಆಯಾ ಶಾಲೆಯಲ್ಲಿ ಆಯ್ಕೆಯಾದ ಅತ್ಯುತ್ತಮವಾದ ಒಂದು ಚಿತ್ರ ಮಾತ್ರ ಗುರುಗಳು ಆಯ್ಕೆ ಮಾಡಿ , ಮುಖ್ಯ ಶಿಕ್ಷಕರು/ಶಿಕ್ಷಕರ ಸಹಿಯೊಂದಿಗೆ ವಾಟ್ಸ್‌ಪ್ ನಂಬರಿಗೆ ಕಳುಹಿಸಬೇಕು. ಹೆಚ್ಚಿನ ಚಿತ್ರಗಳಿಗೆ ಅವಕಾಶವಿರುವುದಿಲ್ಲ.
4. ಆಯ್ಕೆಯಾದ ಚಿತ್ರದೊಂದಿಗೆ ವಿದ್ಯಾರ್ಥಿಯ ಫೋಟೊ ಹೆಸರು, ಶಾಲೆಯ ವಿಳಾಸ ಮತ್ತು ವಿಜ್ಞಾನ ಮಾರ್ಗದರ್ಶಿ ಶಿಕ್ಷಕರ ಹೆಸರನ್ನು ತಪ್ಪದೇ ಸ್ಪಷ್ಟವಾಗಿ ನಮೂದಿಸಬೇಕು.
5. ತಡವಾಗಿ ಕಳುಹಿಸಿದ ಮತ್ತು ಮಾಹಿತಿ ಕೊರತೆ ಇರುವ ಚಿತ್ರಗಳನ್ನು ಪರಿಗಣಿಸಲಾಗುವುದಿಲ್ಲ.
6. ಆಯ್ಕೆಯಾದ ಅತ್ಯುತ್ತಮವಾದ ಒಂದು ಚಿತ್ರವನ್ನು ಫೋಟೋ ಸಹಿತ ಹಂಪಿ ಟೈಮ್ಸ್ ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.
7. ಆಯ್ಕೆ ತಂಡದ ತೀರ್ಮಾನವೇ ಅಂತಿಮವಾಗಿರುತ್ತದೆ.
8. ಮಕ್ಕಳ ಉತ್ತಮ ಶೈಕ್ಷಣಿಕ ಫಲಿತಾಂಶಕ್ಕಾಗಿ ಮುಖ್ಯಗುರುಗಳು ಹಾಗೂ ಶಿಕ್ಷಕರು ನಮ್ಮೊಂದಿಗೆ ಕೈಜೋಡಿಸುತ್ತೀರೆಂಬ ಸದಾಶಯ ನಮ್ಮದು.

**ವಿ.ಸೂ: ಶುಕ್ರವಾರ ಸಂಜೆ 6 ಗಂಟೆಯೊಳಗೆ ಅತ್ಯುತ್ತಮ ಚಿತ್ರದ ಫೋಟೋ ತೆಗೆದು ಮೊಬೈಲ್ ಸಂಖ್ಯೆ 9972603099 ಗೆ ಕಳುಹಿಸಬೇಕು. ಹೆಚ್ಚಿನ ಚಿತ್ರಗಳಿಗೆ ಅವಕಾಶವಿರುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 9448633038**

scan to read epaper.hampitimes.com

**ಹಂಪಿ ಟೈಮ್ಸ್ ಬಳಗ, ವಿಜಯನಗರ**

visit our website at www.hampitimes.com / epaper.hampitimes.com

## SSLC ಈ ಬಾರಿ ಫಲಿತಾಂಶ ನಮ್ಮದೆ ಹೈಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

HAMPI TIMES MARGADARSHI

ಮನಸ್ಸು ಮಾಡು - ಕರ್ತವ್ಯ ನಿಷ್ಠನಾಗು - ಕಾದು ನೋಡು

HAMPI TIMES VIJAYANAGARA

ಹಂಪಿ ಟೈಮ್ಸ್ ಇ–ಪೇಪರ್‌ಗಾಗಿ ಭೇಟಿ ನೀಡಿ: https://epaper.hampitimes.com

ನಿನ್ನ ಏಳಿಗೆಗೆ ನೀನೇ ಶಿಲ್ಪಿ

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಗಣಿತ

### ಸಂಭವನೀಯತೆ

* ಖಚಿತವಾಗಿ ಅಥವಾ ನಿಶ್ಚಿತವಾಗಿ ಸಂಭವಿಸುವ ಒಂದು ಘಟನೆಯ ಸಂಭವನೀಯತೆಯು **ಒಂದು** ಆಗಿರುತ್ತದೆ.
* ಸಂಭವಿಸಲು ಅಸಾಧ್ಯವಾದ ಘಟನೆಯ ಸಂಭವನೀಯತೆಯು **ಸೊನ್ನೆ** ಆಗಿರುತ್ತದೆ.
* ಒಂದು ಪ್ರಯೋಗದ ಎಲ್ಲಾ ಪ್ರಾರ್ಥಮಿಕ ಘಟನೆಗಳ ಸಂಭವನೀಯತೆಗಳ ಮೊತ್ತವು **ಒಂದು** ಆಗಿರುತ್ತದೆ.
* $P(E) + P(\bar{E}) = 1$

1) ಒಂದು ನಾಣ್ಯವನ್ನು ಒಂದು ಸಲ ಚಿಮ್ಮಿದಾಗ ಒಂದು ಪುಚ್ಚವನ್ನು ಪಡೆಯುವ ಸಂಭವನೀಯತೆ ಕಂಡುಹಿಡಿಯಿರಿ

$S=\{H,T\}$ $n(S)=2$

$n(E)=1$ $P(E)=\frac{n(E)}{n(S)}=\frac{1}{2}$

2) ಒಂದು ನಿರ್ದಿಷ್ಟ ದಿನದಂದು ಮಳೆ ಬರುವ ಸಂಭವನೀಯತೆಯು 0.70 ಆದರೆ ಆ ದಿನದಂದು ಮಳೆ ಬರದಿರುವ ಸಂಭವನೀಯತೆ ಎಷ್ಟು?

$P(E) + P(\bar{E}) = 1$

$0.62 + P(\bar{E}) = 1$

$P(\bar{E}) = 1 - 0.70 = 0.30$

3) ಒಂದು ದಾಳವನ್ನು ಒಂದು ಸಲ ಎಸೆಯಲಾಗಿದೆ. ಒಂದು ಸರಿ ಸಂಖ್ಯೆ ಪಡೆಯುವ ಸಂಭವನೀಯತೆ ಕಂಡುಹಿಡಿಯಿರಿ

$S=\{1,2,3,4,5,6\}$ $n(S)=6$

$n(E)=3$ $P(E)=\frac{n(E)}{n(S)}=\frac{3}{6}=\frac{1}{2}$

4) ಒಂದು ಪೆಟ್ಟಿಗೆಯಲ್ಲಿ 1 ರಿಂದ 9 ರ ವರೆಗಿನ ಸಂಖ್ಯೆಗಳು ನಮೂದಿಸರುವ 9 ಕಾರ್ಡುಗಳನ್ನು ಹಾಕಲಾಗಿದೆ. ಆ ಪೆಟ್ಟಿಗೆಯಿಂ ಒಂದು ಕಾರ್ಡನ್ನು ಯಾದೃಚ್ಛಿತವಾಗಿ ತೆಗೆದಾಗ ಅವಿಭಾಜ್ಯ ಸಂಖ್ಯೆಯನ್ನು ಪಡೆಯುವ ಸಂಭವನೀಯತೆಯನ್ನು ಕಂಡುಹಿಡಿಯಿರಿ

$S=\{1,2,3,4,5,6,7,8,9\}$

$n(S)=9$

ಪೆಟ್ಟಿಗೆಯಿಂದ ಒಂದು ಕಾರ್ಡನ್ನು ಯಾದೃಚಿಕವಾಗಿ ತೆಗೆದಾಗ ಅವಿಭಾಜ್ಯ ಸಂಖ್ಯೆಯನ್ನು ಪಡೆಯುವ ಘಟನೆ

$E=\{2,3,5,7\}$

$n(E)=4$ $P(E)=\frac{n(E)}{n(S)}=\frac{4}{6}=\frac{2}{3}$

**ಎರಡು ದಾಳಗಳನ್ನು ಏಕಕಾಲದಲ್ಲಿ ಉರುಳಿಸಿದಾಗ ಬರುವ ಫಲಿತ ಗಣ =**

{ (1,1), (1,2),(1,3),(1,4),(1,5),(1,6)
(2,1), (2,2),(2,3),(2,4),(2,5),(2,6)
(3,1), (3,2),(3,3),(3,4),(3,5),(3,6)
(4,1), (4,2),(4,3),(4,4),(4,5),(4,6)
(5,1), (5,2),(5,3),(5,4),(5,5),(5,6)
(6,1), (6,2),(6,3),(6,4),(6,5),(6,6) }

ಒಟ್ಟು ಘಟನೆಗಳು $n(s) = 36$

5) ಎರಡು ದಾಳಗಳನ್ನು ಏಕಕಾಲದಲ್ಲಿ ಉರುಳಿಸಿದಾಗ ಮೊತ್ತ 9 ಬರುವ ಸಂಭವನೀಯತೆಯನ್ನು ಬರೆಯಿರಿ.

$E = \{(3,6), (4,5), (5,4), (6,3)\}$

$n(E) = 4$

ಘಟನೆಯ ಸಂಭವನೀಯತೆ

$P(E)=\frac{n(E)}{n(S)}=\frac{4}{36}=\frac{1}{9}$

6) **ಚೆನ್ನಾಗಿ ಬೆರೆಸಿದ 52 ಕಾರ್ಡುಗಳ ಒಂದು ಕಟ್ಟಿನಿಂದ ಒಂದು ಕಾರ್ಡ್ ಯಾದೃಚ್ಛಿಕವಾಗಿ ತೆಗೆಯಲಾಗಿದೆ.**

ಫಲಿತಾಂಶ ಗಣ = $n(s) = 52$

**ಸ್ಪೇಡ್ ಮತ್ತು ಕ್ಲಬ್ ---- ಕಪ್ಪು ಬಣ್ಣದ ಕಾರ್ಡ್ ಗಳು**

**ಹಾರ್ಟ್ ಮತ್ತು ಡೈಮಂಡ್ -- ಕೆಂಪು ಬಣ್ಣದ ಕಾರ್ಡ್ ಗಳು**

ಚೆನ್ನಾಗಿ ಬೆರೆಸಿದ 52 ಕಾರ್ಡುಗಳ ಒಂದು ಕಟ್ಟಿನಿಂದ ಒಂದು ಕಾರ್ಡ್ ಯಾದೃಚ್ಛಿಕವಾಗಿ ತೆಗೆಯಲಾಗಿದೆ (1)ಒಂದು ರಾಜ ಮೇಲೆ ಬರುವ ಸಂಭವನೀಯತೆ

$n(E) = 4$ $n(s) = 52$

ಸಂಭವನೀಯತೆ = $P(E)=\frac{n(E)}{n(S)}=\frac{4}{52}=\frac{1}{13}$

ಮುಂದುವರೆಯುವುದು

www.hampitimes.com - Hampi Times Margadarshi

ಮಾರ್ಗದರ್ಶಿ ಶಿಕ್ಷಕರು : **ಎಂ.ಎಸ್.ಮಂಜುನಾಥ,** ಶಿಕ್ಷಕರು, ಸರಕಾರಿ ಪ್ರೌಢಶಾಲೆ ಚಿಲುಗೋಡು ಹಗರಿಬೊಮ್ಮನಹಳ್ಳಿ (ತಾ) ವಿಜಯನಗರ (ಜಿಲ್ಲೆ)

ಸಾಯಿಮಣಿ ಪ್ರಕಾಶನ, ಹೊಸಪೇಟೆ